ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀಹರಿಲೀಲಾರ್ಣವ

ಕವಿ

## ಅಗರಿ ಭಾಸ್ಕರ ರಾವ್

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

# ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಸ್ಥಳ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಹೇರಂಜೆ ಕೃಷ್ಣ ಭಟ್ಟ , ಸೇವಧಿ ಪ್ರಕಾಶನ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೩೮

**ಪಾತ್ರಗಳು:**

ಅಧ್ಯಾಯ 1 : ಮೃತ್ಯುದೇವಿ, ಭೂಮಾತೆ, ಬ್ರಹ್ಮದೇವ

ಅಧ್ಯಾಯ 2 : ಮಹಾವಿಷ್ಣು, ದೇವೇಂದ್ರ, ರವಿ, ಚಂದ್ರ ಮತ್ತಿತರ ಸುರರು, ಬಲಿಚಕ್ರವರ್ತಿ, ಸ್ವರ್ಭಾನು ಮತ್ತಿತರ ಅಸುರರು, ಧನ್ವಂತರಿ, ಮೋಹಿನಿ, ರಾಹು, ಕೇತು

ಅಧ್ಯಾಯ 3 : ಮಹಾವಿಷ್ಣು, ನಾರದ, ಯಮ, ಪ್ರೇತಗಳು, ಚಿತ್ರಗುಪ್ತ, ವೃಷಭ, ನೂಪುರಗಂಗೆ

ಅಧ್ಯಾಯ 4: ಧರ್ಮರಾಯ, ನಾರದ, ಭೀಮ, ಈಶ್ವರ, ತ್ರಿಪುರಾಂತಕ, ಪಶುರೂಪಿ ತ್ರಿಪುರಾಂತಕ, ನಕುಲ, ಪಶುಪಾಲಕರು, ಘೋರಭೀಮ

ಅಧ್ಯಾಯ 5 : ಈಶ್ವರ, ಮಹಾವಿಷ್ಣು, ಮಹಾಲಸಾದೇವಿ (ನಾರಾಯಣಿ), ನಾರದ,

ಅಧ್ಯಾಯ 6 : ಪರಶುರಾಮ, ಬ್ರಾಹ್ಮಣರು, ಚಂಡಾಸುರ, ಚಂಡಾಸುರನ ದೂತ, ಶ್ರೀದೇವೀ

**ಕಥಾ ಸಾರಾಂಶ:**

ಅಧ್ಯಾಯ 1 : ಮೃತ್ಯುದೇವಿ ವಿಜಯ

ಬ್ರಹ್ಮ ಸೃಷ್ಟಿಮಾಡಿದಂತೆ ಶಿವ ಲಯ ಮಾಡದಿದುದರಿಂದ ಭೂದೇವಿಯ ಮೊರೆ. ಬ್ರಹ್ಮನ ಮುಖದಿಂದ ಮೃತ್ಯುದೇವತೆಯ ಜನನ. ಜೀವಿಯ ಆಯುಷ್ಯ ನಿರ್ಣಯ.

ಅಧ್ಯಾಯ 2 : ಕೃತಯುಗದ ಸಮುದ್ರಮಥನದ ಮೋಹಿನಿ

ಸಮುದ್ರಮಥನದಲ್ಲಿ ಅಮೃತಕಲಶಸಹಿತ ಧನ್ವಂತರಿ ಉತ್ಪತ್ತಿ. ವಿಷ್ಣು ಮೋಹಿನಿಯಾಗಿ ದೇವ-ದಾನವರಿಗೆ ಅಮೃತ ಹಂಚುವಾಗ ದೈತ್ಯ ಸ್ವರ್ಭಾನು ದೇವಪಂಕ್ತಿಯಲ್ಲಿ ಸುಧಾಪಾನ ಮಾಡಲು ವಿಷ್ಣುವಿನಿಂದ ಅವನ ಶಿರಚ್ಛೇದ. ದೈತ್ಯನ ಕಂಠನಾಳದಲ್ಲಿದ್ದ ಅಮೃತವು ಗೋದಾವರಿ ಸಂಗಮದಲ್ಲಿ ನದಿ ಸೇರುವುದು. ಉಳಿದ ಅಮೃತವು ಮಹಾಲಸಾಗಿರಿಯಲ್ಲಿ ಮಧುಮತಿನದಿಯಾಗಿ ತೀರ್ಥವಾಗುವುದು.

ಅಧ್ಯಾಯ 3 : ನೂಪುರಗಂಗೆ

ಯಮನಿಗೆ ನಾರದನು ಪಾಪದ ಶಿಕ್ಷೆ ನಿರ್ಣಯಿಸುವಲ್ಲಿ ತಪ್ಪಾಗುತ್ತಿದೆ ಎಂದು ಎಚ್ಚರಿಸುವುದು. ಯಮನು ಹರಿಯ ಕುರಿತು ತಪಸ್ಸು ಮಾಡಿದಾಗ ಹರಿಯು ವೃಷಭ ರೂಪದಲ್ಲಿ ಪ್ರತ್ಯಕ್ಷನಾಗಿ ಅವನ ಪಾದದ ಗೆಜ್ಜೆ ನದಿಯಾಗಿ ಹರಿಯುವುದು.

ಅಧ್ಯಾಯ 4: ಪಶುಪತಿ ಕ್ಷೇತ್ರಮಹಾತ್ಮೆ

ಧರ್ಮರಾಜನಿಗೆ ನಾರದನಿಂದ ಭ್ರಾತೃಹತ್ಯಾದೋಷಕ್ಕಾಗಿ ಶಿವನನ್ನು ಕುರಿತು ತಪಸ್ಸು ಮಾಡಲು ಸೂಚನೆ. ಪಶುಗಳ ಹಿಂಡಿನಲ್ಲಿ ಅಡಗಿದ ಶಿವನನ್ನು ಭೀಮ ಗುರುತಿಸಲು ಶಿವನು ಪಾತಾಳಕ್ಕಿಳಿಯಲು, ಭೀಮ ಪಶುವನ್ನು ಆಕಾಶಕ್ಕೆಸೆಯುತ್ತಾನೆ. ಶಿವ ಒಲಿದು ತಲೆಯು ಬಿದ್ದಲ್ಲಿ ಪಶುಪತಿಯಾಗಿ ನೆಲಸುವೆನೆಂದು ಅನುಗ್ರಹ.

ಅಧ್ಯಾಯ 5 : ಕಲಿಯುಗದ ಮಹಾಲಸಾ ನಾರಾಯಣಿ

ಮೋಹಿನಿಯಾಗಿ ಮಹಾಲಸಾನಾರಾಯಣಿಯ ರೂಪದಲ್ಲಿದ್ದ ವಿಷ್ಣುವನ್ನು ನೋಡಿ ಶಿವನು ಮೋಹಗೊಳ್ಳುವುದು. ಮೋಹಿನಿ ಒಪ್ಪದಿದ್ದಾಗ ಶಿವನು ಬೆಂಬತ್ತಿ ಅಪ್ಪಿಕೊಳ್ಳಲು ವೀರ್ಯಸ್ಖಲನವಾಗಿ ಶಾಸ್ತಾರನ ಜನನ. ಅಲ್ಲಿಯೇ ಹರಿಹರರ ಮಿಲನದ ಸ್ಥಳದಲ್ಲಿ ಮಹಾಲಸಾ ನಾರಾಯಿಣಿಯಾಗಿ ನೆಲೆಸುವ ವಾಗ್ದಾನ.

ಅಧ್ಯಾಯ 6 : ಚಂಡಾಸುರಮರ್ದಿನಿ

ಪರಶುರಾಮನಿಗೆ ವರುಣನು ಭೂಮಿಯನ್ನು ಬಿಟ್ಟುಕೊಟ್ಟು ನಗರ ನಿರ್ಮಾಣ ಮಾಡಿಕೊಡುವುದು. ಬ್ರಾಹ್ಮಣರು ಭಾರ್ಗವಯಾಗ ಮಾಡಲು ಚಂಡಾಸುರ ಉಪದ್ರವಿಸಲು ವಿಪ್ರರಿಂದ ಭಾರ್ಗವಸ್ಮರಣೆ. ಪರಶುರಾಮನಿಂದ ಮಹಾಲಸಾನಾರಾಯಣಿಯ ಪ್ರಾರ್ಥನೆ. ದೇವಿಯು ಒಲಿದು ಬಂದು ರಾಕ್ಷಸನ ಸಂಹಾರ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಕವಿಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಯಕ್ಷವಾಹಿನಿಯ ಯಕ್ಷಪ್ರಸಂಗಯಾದಿ)**

ಅಗರಿ ಭಾಸ್ಕರ ರಾಯರು (ಜನನ 1948) ಭಾಗವತರಾದ ಅಗರಿ ಶ್ರೀನಿವಾಸ ರಾಯರ ಮಗ, ತಾಯಿ ರುಕ್ಮಿಣಿ, ಪತ್ನಿ ಜಲಜಾಕ್ಷಿ. ಸ್ವತಃ ಭಾಗವತರೂ ಹೌದು. ಸುಮಾರು ಮೂವತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಕೆಲವು ಹಸ್ತಪ್ರತಿಗಳು ಅವರಲ್ಲೂ ಲಭ್ಯವಿಲ್ಲ. ಇವರ ಗುಂಡಬಾಳ ಕ್ಷೇತ್ರ ಮಹಾತ್ಮೆ ಅತ್ಯಂತ ಹೆಚ್ಚು ಪ್ರದರ್ಶನ ಕಂಡಿದೆ. ಸುರತ್ಕಲ್ ಮೇಳ, ಧರ್ಮಸ್ಥಳ ಮೇಳಗಳಲ್ಲಿ ಇವರ ಪ್ರಸಂಗಗಳು ಪ್ರದರ್ಶನಗೊಂಡಿವೆ. ಸುಂದರ ಸರಳ ಪದ್ಯಗಳನ್ನು ರಚಿಸಿದ್ದಾರೆ. ತುಳುವಿನಲ್ಲೂ ಪ್ರಸಂಗಗಳನ್ನು ರಚಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಂಗಾರವರ್ಮ ಕಾಳಗ, ಅಗಸ್ತ್ಯ ಮಹರ್ಷಿ, ಏಕಾದಶಿ ಮಹಾತ್ಮೆ, ಗುಂಡಬಾಳ ಕ್ಷೇತ್ರಮಹಾತ್ಮೆ, ತಪಸ್ವೀ ಮಹೇಂದ್ರ, ದಶಮಗ್ರಹ ವಿಜಯ (ವೀರ ರಾಣಿ ಅಪ್ರಮೇಯಿ), ಧರ್ಮವಿಜಯ (ಮನಮೆಚ್ಚಿದ ಮಡದಿ), ನಾಗಚಂದ್ರಿಕಾ (ಷಡ್ಜನ್ಮ ಮೋಕ್ಷ), ನಾಡಕೇದಗೆ, ನ್ಯಾಯ ಕೀರ್ತಿ ವಿಜಯ, ಪೆರ್ಡೂರು ಕ್ಷೇತ್ರಮಹಾತ್ಮೆ, ಬಗ್ಗು ಪಂಜುರ್ಲಿ ಪ್ರತಾಪ, ಬರ್ಬರೀಕ ಪ್ರತಾಪ, ಭಕ್ತ ಪ್ರಹ್ಲಾದ, ಭಸ್ಮಾಸುರ ಕಾಳಗ, ರುದ್ರಾಂತರ್ಗತ ಲಕ್ಷ್ಮೀನರಸಿಂಹ, ಶ್ರೀಕದ್ರಿ ಕ್ಷೇತ್ರಮಹಾತ್ಮೆ, ಶ್ರೀದೇವಿ ತ್ರಿಕರ್ಣೇಶ್ವರಿ ಮಹಾತ್ಮೆ, ಶ್ರೀರಾಘವೇಂದ್ರಮಹಾತ್ಮೆ (ಶ್ರೀ ಮಂತ್ರಾಲಯ ಮಹಾತ್ಮೆ), ಶ್ರೀವಾಣೀ ವಿಲಾಸ, ಶ್ರೀಹರಿ ಲೀಲಾರ್ಣವ, ಶ್ರೀವಿಶ್ವಕರ್ಮಮಹಾತ್ಮೆ, ಸಮುದ್ರ ಮಥನ, ಸುಂದೋಪಸುಂದ ಕಾಳಗ, ಹಯಗ್ರೀವ ದೇವೋದ್ಭವ

**ಟಿಪ್ಪಣಿ** :

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀದೇವೀ ಮನಮೋಹಿನೀ ಗುಣಮಣೀ ದೈತ್ಯಾಂತಕೀ ಚಿನ್ಮಯೀ |
ನೇವಾಸೀಪುರವಾಸಿನೀ ಸುರನುತೇ ದಾಕ್ಷಾಯಣೀ ಕಣ್ಮಣೀ ||
ಬಾಧಾರಿಷ್ಟನಿವಾರಿಣೀ ಸುರನುತೇ ಚಿದ್ರೂಪೇ ಶುಭದಾಯಕೀ |
ಭಕ್ತಾಭೀಷ್ಟಪ್ರದಾಯಿನೀ ಹರಿಪ್ರಿಯೇ ಧ್ಯಾಯಾಮಿ ಚಿತ್ತೇ ಸದಾ || ೧ || [೧]

**ವಾರ್ಧಕ**
ಪುಣ್ಯಪುರುಷನು ನಮ್ಮ ಚಿನ್ಮಯನು ಬಲು ಹಿಂದೆ |
ತನ್ನ ಭಕ್ತರ ಪೊರೆಯೆ ಮೋಹಿನಿಯ ರೂಪವನು |
ಸನ್ಮತದಿ ಧರಿಸುತ್ತ ಸುಧೆಯ ಸುರರಿಂಗಿತ್ತು ಅಸುರರಿಗೆ ಸುರೆಯ ಕುಡಿಸಿ ||
ಪನ್ನಗಾಭರಣನನು ಮತಿಭ್ರಮಣೆಗೊಳಿಸುತ್ತ |
ತನ್ನ ಮೋಹಿಪ ತೆರದಿ ಮಾಡಿದರೆ ಅದರಿಂದ |
ಘನ್ನ ಕಥನವದೊಂದು ಉದಿಸಲ್ಕೆ ಬರೆದೆನಿದ ಯಕ್ಷಗಾನದಲಿ ಮುದದಿ || ೧ ||

ಕಾಮಿತಾರ್ಥವನೀವ ರಮಣೀಯ ಕಥನವಿದು |
ಆ ಮಹಾಲಸದೇವಿ ನಾರಾಯಣೀ ದಯದಿ |
ಪ್ರೇಮದಿಂ ಬರೆಯಲ್ಕೆ ಅಗರಿ ಭಾಸ್ಕರನು ನಾ ಯಕ್ಷಗಾನದಲಿ ಮುದದಿ ||
ಈ ಮಹಿಯ ಪರಮಸಖ ತೇಜೇಶ್ವರರ ಬಯಕೆ |
ಆ ಮಹಾ ಸನ್ಮಿತ್ರರೊತ್ತಾಸೆಯಿಂದಾಯ್ತು |
ಶ್ರೀಮಹಾಲಸಚರಿತೆ ಪ್ರಾಜ್ಞರಿದ ಮೆರೆಸುವುದು ತಿದ್ದಿ ತಪ್ಪುಗಳ ದಯದಿ || ೨ || [೩]

**ಅಧ್ಯಾಯ ಒಂದು: ಮೃತ್ಯುದೇವಿ ವಿಜಯ**

**ಕಾಂಭೋದಿ - ಝಂಪೆ**
ಋತ್ವಿಜರು ಕೇಳಿ ಶತ | ಪತ್ರಸಂಭವ ದೇವಿ |
ಯಿತ್ತ ಆಜ್ಞೆಯ ತೆರದೊಳಂದು ||
ಉತ್ತಮದ ಸೃಷ್ಟಿಸುವ | ಕಜ್ಜ ಗೈಯುತಲಿರಲು |
ಪೃಥ್ವಿ ವಿಕಸನಗೊಳುವ ತೆರದಿ || ೧ ||

ನರ ಕೀಟ ಮಿಗ ಪಕ್ಷಿ | ತರುಲತೆಗಳಾ ಸಾಲು |
ಸರಿಸೃಪವು ಜಲಚರಗಳಿಂದಾ ||
ಧರೆಯು ತುಂಬಿರೆ ಶ್ರಮವ | ನರಿಯದಾ ಕಮಲಭವ |
ಗುರುತರದ ಹೊಣೆಯನರಿತಿರಲು || ೨ ||

ಸರಸಿಜಾಸನ ಸೃಷ್ಟಿ | ಧರೆಯೊಳಗೆ ನಡೆದಿರಲು |
ಹರಿಯು ಪಾಲನಕರ್ತನಾಗಿ ||
ನಿರತ ಸಂರಕ್ಷಿಸಲು | ಧರಣಿ ಮಂಡಲ ಶೋಭಿ |
ಸಿರಲು ಹೊಸ ಚೈತನ್ಯ ತುಂಬಿ || ೩ || [೬]

**ಭಾಮಿನಿ**
ಸರಸಿಜೋದ್ಭವ ಸೃಷ್ಟಿಸಲು ಶ್ರೀ |
ಹರಿಯು ಸಲಹಲು ಪ್ರೀತಿಯಿಂದಲೆ |
ಧರೆಯು ಶೋಭಿಸೆ ಹಚ್ಚಹೊಸ ಚೈತನ್ಯ ತುಂಬಿರಲು ||
ಹರನು ಲಯಕಾರ್ಯವನು ಮಾಡದೆ |
ಇರಲು ಸುಮ್ಮನೆ ಧರಣಿ ದೇವಿಯ |
ಪರಿಭವವನೇನೆಂಬೆ ಮೆಯ್‌ತಳೆದಲ್ಲಿ ಕಾಣಿಸಲು || ೧ || [೭]

**ಕೇದಾರಗೌಳ - ಅಷ್ಟ**
ಬಂದಳಾಕ್ಷಣದಿ ವ | ಸುಂಧರೆ ಭೂಮಾತೆ |
ಮಂದಗಮನೆ ಮುದದಿ ||
ಸುಂದರ ಸ್ತ್ರೀರೂಪ | ದಿಂದಲೆ ಶೋಭಿಸೆ |
ಚಂದದಿ ವಯ್ಯಾರದಿ || ೧ ||

ತುಂಬಿದ ಸೃಷ್ಟಿಯ | ಸೌಭಾಗ್ಯ ಸಿರಿಯನಾ |
ಅಂಬುಜಾನನೆ ಕಾಣುತ ||
ಸಂಭ್ರಮಿಸುತಲೆ ಮೆಯ್ | ದುಂಬಿ ಸಂತಸದಿಂದ |
ಕಂಬುಕಂಠಿನಿ ನಗುತ || ೨ ||

ಕುಣಿಕುಣಿದಾಡುತ್ತ | ಮನಸಾರೆ ಹಾಡುತ್ತ |
ಕನಕಾಂಗಿ ಬರುತಿರಲು ||
ವನಿತೆಗೆ ಮೆಯ್‌ಭಾರ | ಹೆಚ್ಚಾಗಿ ಕಳವಳ |
ವನು ತಾಳ್ದು ದುಗುಡದೊಳು || ೩ ||

ಮುಳುಗುವ ಅನುಭವ | ನಳಿನಮುಖಿಗೆ ಬರೆ |
ಕಳವಳಗೊಳುತಂದಿಲಿ ||
ಜಲದೊಳು ಭಯದೊಳು | ಚೆಲುವೆ ತಾ ಮನನೊಂದು |
ಬಳಲುತ್ತ ಭಾರದಲಿ || ೪ ||

ಹೊರಲಾರೆ ಭಾರವ | ಕಾರಣವೇನೆಂದು |
ಅರಿಯದಾದೆನು ಇಂದಿಲಿ ||
ಸರಸಿಜಭವನೊಳು | ಪರಿಭವವೆಲ್ಲವ |
ನರುಹುವೆನೆಂದಂದಿಲಿ || ೫ || [೧೨]

**ಭಾಮಿನಿ**
ನಿತ್ಯನೂತನ ಸೃಷ್ಟಿಕಾರ್ಯದಿ |
ಪೃಥ್ವಿಭಾರವು ಹೆಚ್ಚಿ ನಾಶದ |
ಕೃತ್ಯ ನಡೆಯದೆ ಜೀವಿ ಜಂತುವ ಸಂಖ್ಯೆ ಹೆಚ್ಚಳದಿ ||
ಒತ್ತಡಕೆ ಸಿಲುಕುತ್ತ ನರಳುವ |
ಮರ್ತ್ಯಲೋಕದ ಪರಿಯ ಕಾಣುತ |
ಮತ್ತಕಾಶಿನಿ ಬಾಧೆ ತಾಳದೆ ವಿಧಿಯ ಬಳಿಗೈದೆ || ೧ || [೧೩]

**ಮಧುಮಾಧವಿ - ಅಷ್ಟ**
ಏನೆಂಬೆ ಭೂದೇವೀ ಮಾನಿನಿ ರನ್ನೆ |
ಕಾಣುತ್ತ ಸಂತಸಗೊಂಡೆನು ನಾನೆ ||
ಸಾನುರಾಗದಿ ಬಂದ ಕಾರಣ ಹೇಳು |
ಆನನ ಕಂದಿದೆಯೇನಿದು ಗೋಳು || ೧ ||

ಸರಸಿಜಾಸನದೇವ ಶರಣಸಂಜೀವ |
ಕರುಣಿಸು ಅಭಯವ ಪೇಳ್ವೆ ಕಳವಳವ ||
ಹೊರಲಾರೆ ಧರೆಯನ್ನು ಭಾರದೊಳಿಂದು |
ಪರಿಹಾರ ಕರುಣಿಸು ಹೇ ದಯಾಸಿಂಧು || ೨ ||

ಕಳವಳ ಬೇಡಮ್ಮ ತಾಳು ಧೈರ್ಯವನು |
ತಿಳಿದೆನು ನಾನೀಗ ನಿನ್ನ ಕಷ್ಟವನು ||
ಕೆಲಕಾಲದೊಳು ನಿನ್ನ ಕಷ್ಟ ನೀಗುವುದು |
ನಳಿನಾಕ್ಷಿ ತೆರಳೀಗ ಸಂತಸತಳೆದು || ೩ || [೧೬]

**ಭಾಮಿನಿ**
ಧರಣಿದೇವಿಯ ಕಳುಹಿ ಕಮಲಜ |
ಹರನ ಧ್ಯಾನಿಸೆ ಭಕ್ತಿಯೊಳು ಸ್ಮರ |
ಹರನು ಬ್ರಹ್ಮನ ಹೊಕ್ಕು ಹೃದಯದಿ ಹುದುಗಿ ನಿಂತಿರಲು ||
ಕೆರಳಿ ನಿಂತಾ ಅಂಬುಜಾಸನ |
ಧುರ ಧುರನೆ ನೋಡಿದರೆ ಮೊಗದಿಂ |
ಹೊರಡೆ ರೋಷಾಗ್ನಿಯದು ಇಳೆಯನು ಸುಟ್ಟು ಬಿಡುವಂತೆ || ೧ || [೧೭]

**ಕಂದ**
ಗೋಳಿಡೆ ಭಯದಿಂ ಸುರರಾ |
ಫಾಲಾಕ್ಷನ ಮೊರೆ ಹೊಗೆ ತಿಳಿದಾ ಪಂಚಾಸ್ಯಂ ||
ಕೇಳುವೆ ವಿಧಿಯನು ಎನುತಾ |
ವೇಳೆ ಕಳೆಯದೆ ಬರೆ ಕಂಡನಜನಂ ನಮಿಸಲ್ || ೧ || [೧೮]

**ನವರೋಜು - ಏಕ**
ಬಿಡು ಬಿಡು ರೋಷವ ಅಜನೆ | ಕಂ |
ಗೆಡುತಿದೆ ಲೋಕವು ಶ್ಯಾನೆ ||
ಮೃಡ ನಾ ಬಂದಿರೆ | ತಡವೇತಕೆ ನಾವ್ |
ಹುಡುಕುವ ದಾರಿಯ | ಕೆಡುತಿದೆ ಪೃಥ್ವಿಯು || ೧ ||

ಶಮನವಾಗಲಿ ರೋಷ | ಹೇ |
ಕಮಲಜನೇ ಬಿಡು ದ್ವೇಷ ||
ಅಮರರು ಬೆದರುತ | ಸ್ತುತಿಪರು ನಿನ್ನನು |
ಕ್ಷಮಿಸೈ ಜನರನು | ಮಂಗಳ ಕರುಣಿಸು || ೨ ||

ತ್ರ್ಯಯಂಬಕನಿಂತೆನಲಾಗ | ಆ |
ಅಂಬುಜಾಸನ ಬೇಗ ||
ಶಂಬರವೈರಿಯ | ಪದಕೆರಗುತ ಹೇ |
ಶಂಭುವೆ ಬಂದೆಯ | ನಂಬಿರೆ ನಿನ್ನನು || ೩ || [೨೧]

**ವಾರ್ಧಕ**
ಋತ್ವಿಜರು ಕೇಳಿರೈ ಕೃತ್ತಿವಾಸನ ನುಡಿಗೆ |
ಅರ್ತಿಯೊಳು ತಲೆದೂಗಿ ಕ್ರೋಧವನೆ ಬಿಡಲಾಗಿ |
ಪೃಥ್ವಿಲಿ ಪ್ರವೃತ್ತಿ ನಿವೃತ್ತಿಗಳು ಎಂಬೆರಡು ಹುಟ್ಟು ಸಾವಿನ ಹಾದಿಯು ||
ವ್ಯಕ್ತವಾಯಿತು ವಿಧಿಯ ರೋಷಾಗ್ನಿ ಈ ತೆರದಿ |
ಕೃತ್ತಿವಾಸನು ತೆರಳಲೇನೆಂಬೆ ಸೋಜಿಗವ |
ಮತ್ತೆಯಾ ಕಮಲಜನ ಮೊಗದಿಂದ ಜನಿಸಿದುದು ಸ್ತ್ರೀರೂಪವೊಂದು ನೋಡೆ || ೧ || [೨೨]

**ಕಾಂಭೋದಿ - ಝಂಪೆ**
ರಕ್ತವರ್ಣದ ಸೀರೆ | ಕಮಲಪುಷ್ಪದ ಮಾಲೆ |
ಕತ್ತಿನೊಳು ಧರಿಸಿರಲು ನಾರಿ ||
ಉತ್ತಮದ ಕರ್ಣಕುಂ | ಡಲಧಾರಿ ಗುಳಿಬಿದ್ದ |
ನೇತ್ರದಿಂ ಶೋಭಿಸುವ ದೇವಿ || ೧ ||

ದಕ್ಷಿಣದ ದಿಕ್ಕಿನೆಡೆ | ಪಯಣಿಸುತಲಾ ನಾರಿ |
ಈಕ್ಷಿಸುತ ಕಮಲಸಂಭವನ ||
ರಕ್ಷಿಪುದು ಪುಟ್ಟಿಸಿದ | ಜನಕ ನೀನಿಪ್ಪೆಯೆನ |
ಗೀ ಕ್ಷಣದ ಕಾರ್ಯವೇನೆನುತ || ೨ || [೨೪]

**ಸುರುಟಿ - ಏಕ**
ಮಂಗಳಾಂಗಿ ಕೇಳೇ | ಕೋಮಲೆ |
ಭೃಂಗಕುಂತಳೆ ಬಾಲೆ ||
ಕಂಗೆಡುತಿರೆ ಧರೆ | ತುಂಬಿದ ಭಾರದಿ |
ಅಂಗವ ಸ್ಫುರಿಸಲು | ಜನಿಸಿದೆಯೀ ಕ್ಷಣ || ೧ ||

ಮೃತ್ಯುದೇವಿ ನೀನು | ಇಳೆಯಾ |
ಪತ್ತು ನೀಗಲಿನ್ನು ||
ಇತ್ತೆನು ಆಜ್ಞೆಯ | ಪೃಥ್ವಿಯ ಜನರಿಗೆ |
ಮೃತ್ಯುವಾಗಿ ಕೊ | ಲ್ಲುತ್ತಲೆ ಬರುವುದು || ೨ || [೨೬]

**ಸಾಂಗತ್ಯ - ರೂಪಕ**
ಬ್ರಹ್ಮನಾಣತಿಯಂದು ಕರ್ಣಕರ್ಕಶವಾಗೆ |
ಮಮ್ಮಲ ಮರುಗುತ್ತಲಂದು ||
ಬೊಮ್ಮನ ಪದತಲಕೆರಗುತ್ತ ನುಡಿದಳು |
ಉಮ್ಮಳಿಸಲು ದುಃಖ ನೊಂದು || || ೧ ||

ಬ್ರಹ್ಮದೇವನೆ ಬೇಡ ಧರ್ಮಕಾರ್ಯವಿದಲ್ಲ |
ಕರ್ಮಭೂಮಿಯೊಳು ನಾ ತರುಣಿ ||
ಉನ್ಮತ್ತಳಂತೆ ಥೀ ಕೊಲ್ಲಲಾರೆನು ದೇವ |
ಒಮ್ಮೆ ಯೋಚಿಸು ನಿನ್ನ ಮನದಿ || || ೨ ||

ತರುಣಿ ನಾನಬಲೆ ಕೋಮಲೆ ಪುಟ್ಟಿದಾಕ್ಷಣ |
ತರಿವ ಕಾರ್ಯದ ನೇಮವಿತ್ತೆ ||
ಹರಹರಾ ಯಾರನ್ನು ತರಿಯಲಿ ಆಗದು |
ಸರಸಿಜಾಸನ ದುಃಖವಿತ್ತೆ || ೩ || [೨೯]

**ಭಾಮಿನಿ**
ಬಾಲ ವೃದ್ಧರು ಯುವತಿ ಪುರುಷರು |
ಪೇಳಲೇನದ ಧರ್ಮನಿರತರು |
ಶೀಲವಂತರು ತಂದೆ ಮಕ್ಕಳು ಅಣ್ಣತಂಗಿಯರಾ ||
ಕಾಲನೆಡೆ ನಾ ಕಳುಹೆ ಜನ ಮುಗಿ |
ಬೀಳುವರು ಹರಿ ಹಾಯ್ದು ಬೈವರು |
ತಾಳಲಾರೆನು ಹೆದರುತಿದೆ ಮನ ದಯವ ನೀ ಮಾಡು || ೧ || [೩೦]

**ವಾರ್ಧಕ**
ಮತ್ತಕಾಶಿನಿ ನೀನು ಪೃಥ್ವಿನಾಶಕ್ಕೆ ನಾ |
ಸೃಷ್ಟಿಸಿರೆ ನಿನ್ನನ್ನೆ ಬರಿದೆ ನೆವನವು ಬೇಡ |
ಅತ್ಯವಶ್ಯವು ಜೀವಿ ಸಂಹಾರಕಾರ್ಯವದು ನಿನ್ನಿಂದ ನೆರವೇರಲಿ ||
ಮತ್ತೆ ಯೋಚನೆಯುಂಟೆ ತಡಮಾಡದ್ಯೆದುವುದು |
ಹೊತ್ತುಕಳೆಯದೆ ನಿನ್ನ ಕಜ್ಜವನು ಮಾಡುವುದು |
ಇತ್ತೆನಾಜ್ಞೆಯ ನಿನಗೆ ಹೋಗೆಂದು ಆ ಬ್ರಹ್ಮ ತೆರಳಿದರೆ ಅಲ್ಲಿಂದಲೇ || ೧ || [೩೧]

**ಕೇದಾರಗೌಳ - ಅಷ್ಟ**
ಇತ್ತರಾಜ್ಞೆಯನಂದು | ಮೃತ್ಯುದೇವತೆ ಕೇಳಿ |
ಚಿತ್ತದಿ ಕಳವಳಿಸಿ ||
ಯುಕ್ತವಲ್ಲದ ಕಾರ್ಯ | ಸರ್ವತ್ರ ಮಾಡೆನು |
ಭಕ್ತಿಮಾರ್ಗವನರಸಿ || ೧ ||

ಜಲಜಸಂಭವವನ್ನು | ಒಲಿಸಿಕೊಳ್ಳಲು ಬೇಗ |
ನಳಿನಾಕ್ಷಿ ನಡೆತಂದಳು ||
ಸಲೆ ಧೇನುಕಾಶ್ರಮ | ದೊಳು ನಿಂತು ತಪವನೆ |
ಛಲದಲಿ ಕೈಗೊಳ್ಳಲು || ೨ ||

ವಾಣಿರಮಣ ದೇವ | ದೀನರಕ್ಷಕ ನೋಡು |
ಮಾನಿನಿ ನಾನಿಪ್ಪೆನು ||
ಪ್ರಾಣತೆಗೆವ ಕ್ರೂರ | ಹೀನಕೃತ್ಯವ ಮಾಡ |
ಲೇನೆಂಬೆ ಮನವೊಪ್ಪದು || ೩ ||

ಕಣ್ಣೀರ ಸುರಿಸುತ್ತ | ಚಿನ್ಮಯಮೂರ್ತಿಯ |
ಮನ್ಮನದೊಳು ಧ್ಯಾನಿಸಿ ||
ಸನ್ನುತಾಂಗಳು ಭಕ್ತಿ | ಭಾವದಿ ಸ್ತುತಿಸಲ್ಕೆ |
ಎನ್ನಲೇನಂದಿನೊಳು || ೪ || [೩೫]

**ಭಾಮಿನಿ**
ಕಳೆಯೆ ವರುಷ ಸಹಸ್ರ ಲೆಕ್ಕದಿ |
ಲಲನೆಯಂದಾ ಘೋರ ತಪದೊಳು |
ಜಲಜಸಂಭವನನ್ನು ಒಲಿಸಲು ತಪದೊಳಿರುತಿರಲು ||
ಒಲಿದು ಮೆಯ್ದೋರುತ್ತ ಪೇಳಿದ |
ನಳಿನಮುಖಿ ಬಿಡು ತಪವ ಮೆಚ್ಚಿದೆ
ಛಲವ ಬಿಟ್ಟೇಳೀಗ ಪರಿಹಾರವನು ಸೂಚಿಸುವೆ || || ೧ || [೩೬]

**ಸುರುಟಿ - ಏಕ**
ನಳಿನಮುಖಿಯೆ ಕೇಳೆ | ಶ್ಯಾಮಲೆ |
ಕಳವಳ ಬಿಡು ಬಾಲೆ ||
ಲಲನೆಯೆ ನಿನ್ನಯ | ನೇತ್ರದಿಂದುದುರಿದ |
ಸಲಿಲವನಾ ಅಂ | ಜಲಿಯೊಳು ಪಿಡಿದಿಹೆ || ೧ ||

ಸುರಿಸಿದ ಕಣ್ಣೀರು | ಜಗದೊಳು |
ಹರಡಿತು ವ್ಯಾಧಿಗಳು ||
ಮರಣದ ಕಾಲಕೆ | ರೋಗರುಜಿನಗಳು |
ನರರಿಗೆ ಬರಲೈ | ಕಾಮದ ಜೊತೆಯೊಳು || ೨ ||

ಮರೆವರು ನಿನ್ನನ್ನು | ರೋಗದಿ |
ಮರಣಗೊಳ್ಳಲಿನ್ನು ||
ಬರದಾ ಪಾಪವು | ವರವನುಯಿತ್ತಿಹೆ |
ತೆರಳೌ ತೋಷದಿ | ತರಳೆಯೆ ಕಾರ್ಯಕೆ || ೩ || [೩೯]

**ಸೌರಾಷ್ಟ್ರ - ತ್ರಿವುಡೆ**
ಬ್ರಹ್ಮನಂಘ್ರಿಗೆ ಮಣಿದು ಪೇಳ್ದಳು |
ಕರ್ಮಭೂಮಿಯ ಮರ್ಮಯೇನೈ |
ಧರ್ಮಕಾಲದ ಸ್ಥಿತಿಗತಿಯ ನೀ | ಸನ್ಮತದಲಿ || ೧ ||

ಕಾಲಭೇದವದುಂಟೆ ಧರ್ಮಕೆ |
ಪೇಳು ಸ್ಥಿರತೆಯ ಕಾಣಲುಂಟೇ |
ಕಾಲಧರ್ಮದ ಅಂತರವನೀ | ಪೇಳು ಜನಕ || ೨ || [೪೧]

**ವಾರ್ಧಕ**
ಕೃತ ತ್ರೇತ ದ್ವಾಪರಾ ಕಲಿಯೆಂಬ ನಾಲ್ಕುಯುಗ |
ಕೃತಕೆ ಹದಿನೇಳು ಲಕ್ಷದ ವರುಷದಾಯುಷ್ಯ |
ಹಿತದಿ ತ್ರೇತಕ್ಕೆ ಹನ್ನೆರಡು ಮುಕ್ಕಾಲು ಲಕ್ಷ ವರುಷಗಳು ಕೇಳು ||
ಮತಿಯುತಳೆ ದ್ವಾಪರಕೆ ಎಂಟುವರೆ ಲಕ್ಷದಾ |
ಅತಿಶಯದ ಆಯುಷ್ಯ ಮುಂದೆ ಬಹ ಕಲಿಕಾಲ |
ಜತನದಿಂ ಕೇಳುವುದು ನಾಲ್ಕು ಕಾಲು ಲಕ್ಷ ವರುಷಗಳು ವಿಧಿ ನಿರ್ಣಯ || ೧ ||

ಕೃತಯುಗದಿ ನೋಡಿದರೆ ನಾಲ್ಕು ಸಾವಿರ ವರ್ಷ |
ಹಿತದ ಆಯುಷ್ಯ ಮಾನವರಿಂಗೆ ತ್ರೇತದೊಳ್ |
ಅತಿಶಯದ ಮೂರು ಸಾವಿರ ವರ್ಷ ದ್ವಾಪರಕೆ ಎರಡು ಸಾವಿರಕೆ ನಿಲಲಿ ||
ಜತನದಿಂ ಕೇಳುವುದು ಕಲಿಯುಗದಿ ಮಾನವರು |
ಶತಮಾನದಾಯುಷ್ಯ ಹೊಂದುವರು ಅಲ್ಪಾಯು |
ಅತಿಗರ್ವಿ ಮಂದಮತಿಗಳು ನೋಡೆ ಸಾಕಷ್ಟೆ ನಿರ್ಣಯವ ಕೈಗೊಳ್ಳಲು || ೨ ||

ನಾಲ್ಕು ಮೂರರದೊಂದರನುಪಾತ ಧರ್ಮಕ್ಕೆ |
ನಾಲ್ಕು ಮೂರೆರಡೊಂದರನುಪಾತ ಕಾಲಕ್ಕೆ |
ನೀ ಕೇಳು ಕಲಿಕಾಲ ಬಹು ಘೋರ ದುಃಸ್ವಪ್ನ ನರಕದನುಭವ ಕೊಡುವುದು ||
ಲೋಕ ರಕ್ಷಿಪನಾದೆ ಕಲ್ಲಾಗಿ ನಿಂತಿರಲು |
ಭೀಕರವು ಮೃತ್ಯುದೇವಿಯೆ ನಿನ್ನ ವೈಭವವ |
ಮರ್ತ್ಯಲೋಕದಿ ತೋರು ಕಲಿಕಾಲ ಮಹಿಮೆಯನು ಮಂದಮತಿಗಳು ಅರಿಯಲಿ || ೩ || [೪೪]

**ಮಾರವಿ - ಏಕ**
ಕನಕಗರ್ಭನಿಗೆ ಮಣಿದಳು ಹರುಷದಿ |
ವನಿತೆಯು ಪೇಳಿದಳು ||
ಮನಕತಿ ತೋಷವ ಕೊಟ್ಟೆಯ ಇಂದಿಗೆ |
ಅನುನಯದಲಿ ಬಿಡದೆ || ೧ ||

ಗೋಳಾಡಿಸುವೆ ನರರನು ಕಲಿಯುಗ |
ವೇಳೆಯೊಳಗೆ ನಿಜವು ||
ಕಾಲನ ಮಹಿಮೆಯ ತೋರಗೊಡುವೆನು |
ಜಾಲದ ಮಡಿಯಲ್ಲಿ || ೨ || [೪೬]

**ಭಾಮಿನಿ**
ಮಣಿದ ಮಗಳನು ಕಂಡು ಹರುಷದಿ |
ಕನಕಗರ್ಭನು ಪೇಳ್ದ ಮೃತ್ಯುವೆ |
ಜನಪದದಿ ಹರಸಿರುವ ವ್ಯಾಧಿಗಳಿಂದ ಕಲಿಕಾಲ ||
ಜನರ ಜೀವನ ದುರ್ಭರವು ದು |
ರ್ಜನರ ವೈಭವ ದೇವನಿಂದನೆ |
ಮನುಜರನು ಕಾಡುವುದು ನಿನ್ನಯ ವಿಜಯ ವರ್ಧಿಸಲಿ || ೧ ||

ನರರು ನರರನೆ ತಿಂಬ ಕಾಲದಿ |
ಮರುಕದೋರೆನುಯೆನ್ನ ವಿಕ್ರಮ |
ಮೆರೆಯುವುದು ಕಲಿಕಾಲ ನಿರ್ನಾಣತಿಯ ತೆರದೊಳಗೆ ||
ಹರಸಿ ಕಳುಹುವುದಿನ್ನು ಬಂದರೆ |
ತರಳೆ ಮೃತ್ಯುವ ಮನ್ನಿಸುತಲಾ |
ಸರಸಿಜೋದ್ಭವ ಕಳುಹಿಕೊಟ್ಟನು ಬಹಳ ಸಂಭ್ರಮದಿ || ೨ || [೪೮]

**ಅಧ್ಯಾಯ ಎರಡು: ಕೃತಯುಗದ ಸಮುದ್ರಮಥನದ ಮೋಹಿನಿ**

**ವಾರ್ಧಕ**
ಪರಮ ಋಷಿಗಳು ಕೇಳಿ ಸುರರ ಸಂಪದವೆಲ್ಲ |
ವರ ಮಹಾ ದೂರ್ವಾಸ ಮುನಿಶಾಪಕೆರವಾಗಿ |
ಶರಧಿತಳ ಸೇರಿರಲು ಸುರರು ಕಂಗೆಡುತಂದು ಶ್ರೀಹರಿಯ ಮೊರೆ ಹೊಕ್ಕಲು ||
ಕರುಣವಾರಿಧಿಯಂದು ಅಭಯವೀಯುತಲಾಗ |
ಸುರರು ಅಸುರರು ಕೂಡಿ ಶರಧಿಯನೆ ಮಥಿಸುವುದು |
ಸುರವಸ್ತುಗಳ ಮರಳಿ ಪಡೆಯುವಿರಿ ಅಂತ್ಯದೊಳು ಸುಧೆಯು ದೊರಕುವುದೆನ್ನಲು || ೧ ||

ಇಂದಿರೇಶನು ನುಡಿದ ಬರ್ದಿಲರೆ ತನ್ನಿರೈ |
ಮಂದರದ ಪರ್ವತವ ಕಡೆಗೋಲು ಮಥನಕ್ಕೆ |
ಚಂದದಾ ಹಗ್ಗ ವಾಸುಕಿಯಪ್ಪ ಔಷಧದ ಗಿಡಲತೆಗಳನು ತರುವುದು ||
ಮುಂದಿರುವ ಕ್ಷೀರಸಾಗರದೊಳಗೆ ಸುರಿಯುತ್ತ |
ಮಂದಮತಿ ರಾಕ್ಷಸರ ನೆರವಿಂದ ಕಡೆಯಲ್ಕೆ |
ಸಂದೇಹ ಬೇಡ ಸುರವಸ್ತುಗಳು ಒಂದೊಂದು ಉದಯಿಸಲು ಸರಿಸಮಯದಿ || ೨ ||

ಅತಿಶಯದ ಉತ್ಸಾಹ ಮಥನಕಾಲದಿ ತೋರೆ |
ಕ್ಷಿತಿಯ ಜನ ಬೆರಗಾಗೆ ಒಂದೊಂದು ಸುರವಸ್ತು |
ಜತನದಿಂ ಸುರರಿಂಗೆ ಪ್ರಾಪ್ತಿಸಲ್ ಹರಿಲೀಲೆಯೇನೆಂದು ಬಣ್ಣಿಸುವೆನು ||
ರತಿಪತಿಯ ಪಿತನ ದಯೆ ಪ್ರಾಪ್ತಿಸಿತು ಕೊನೆಯಲ್ಲಿ |
ಅತಿಪಾವನದ ಸುಧೆಯ ಕಲಶವನು ಕರದೊಳಗೆ |
ಹಿತದಿ ಧರಿಸಿಪ್ಪ ಧನ್ವಂತರಿಯು ಕಾಣಿಸಲು ಶತಕೋಟಿ ರವಿತೇಜದಿ || ೩ ||

ಪುಣ್ಯಪುರುಷನು ನಮ್ಮ ಚಿನ್ಮಯನ ಒಂದಂಶ |
ಸನ್ಮತದಿ ಸೇರಿರಲು ಮನ್ವಂತರವೆ ಪೊಸತು |
ಎನ್ನಿಸಲು ದೈತ್ಯ ಬರ್ದಿಲರೆಲ್ಲ ಮಥನವನು ನಿಲ್ಲಿಸಲು ಸಂಭ್ರಮದಲಿ ||
ಕಣ್ಣಿಗಾನಂದವನೆ ತಂದಿರಲು ಅಸುರಕುಲ |
ನಿರ್ಣಯವ ಮಾಡಿದರು ಸುಧೆಯು ತಮ್ಮಯ ಕುಲಕೆ |
ಮುನ್ನ ಜನಿಸಿದ ಶ್ರೇಷ್ಠ ಸಂಪದವು ಸುರರಿಂಗೆ ಸೇರಿದರೆ ಬಿಡಬಾರದು || ೪ || [೫೨]

**ಸೌರಾಷ್ಟ್ರ - ತ್ರಿವುಡೆ**
ದೈತ್ಯಪತಿ ಬಲಿ ನುಡಿದ ಖಳರಲಿ |
ವ್ಯರ್ಥವಲ್ಲವು ನಮ್ಮ ಶ್ರಮ ಬಲು |
ಉತ್ತಮದ ಸುಧೆ ನಮ್ಮ ಪಾಲಿಗೆ | ದಕ್ಕಬೇಕು || ೧ ||

ಮಥನಕಾಲದಿ ಜನಿಸಿದಂತಹ |
ಅತಿಶಯದ ರತುನಗಳು ಸುರರಿಗೆ |
ಹಿತದಿ ಸೇರಿರೆ ನಮ್ಮ ಪಾಲಿಗೆ | ವ್ಯರ್ಥ ಶ್ರಮವು || ೨ ||

ಸುರರ ನೋಡಿರಿ ಸುಧೆಯ ಕಲಶವ |
ಹರುಷದೊಳು ಪಿಡಿಯುವರು ಮೋಸದಿ |
ಅರಿತು ಸುಮ್ಮನೆ ಇರುವುದೇತಕೆ | ಪೊರಡಿರಿಂದು || ೩ ||

ಕಸಿದು ಧನ್ವಂತರಿಯ ಕರದೊಳ |
ಗೆಸೆವ ಕಲಶವ ಸೆಳೆದು ತಮ್ಮಯ |
ವಶಕೆ ಪಡೆಯುತ ಓಡಲಂದಾ | ಅಸುರರೆಲ್ಲ || ೪ || [೫೬]

**ಭಾಮಿನಿ**
ಸುರಪ ಕಾಣುತ ಭೀತಿ ತಾಳಿದ |
ಬರಿದೆ ತಡೆಯವುದೆಂತು ದೈತ್ಯರ |
ಪರಮಸುಧೆಯನು ಕುಡಿದರಾದರೆ ನಮಗೆ ಗೆಲುವುಂಟೆ ||
ಹರಿಯೆ ನೀನೇ ರಕ್ಷಿಪುದು ಈ |
ಪರಮಸಂಕಷ್ಟವನು ನೀಗಿಸು |
ದುರುಳರೊಡನಿಹ ಸುಧೆಯ ಕಲಶವ ಸುರರಿಗೀಯುವುದು || ೧ || [೫೭]

**ವಾರ್ಧಕ**
ಪದುಮಾಕ್ಷ ತಿಳಿದನಾ ಸುಧೆಯ ಕಲಶವ ಪಿಡಿದ |
ಮದಮುಖರ ಮೋಸದಲಿ ಮರುಳುಗೊಳಿಸುತ್ತಲಾ |
ಸುಧೆಯ ಕಲಶವ ಪಿಡಿದು ಸುರರಿಗೀಯುವ ಬಗೆಗೆ ಯೋಚಿಸಿದನಾಕ್ಷಣದಲಿ ||
ತ್ರಿದಶರಿಗೆ ಅಭಯವನೆ ಕರುಣಿಸುತ ಶ್ರೀರಮಣ |
ಉದದಿಮಧ್ಯದೊಳು ಮೋಹಕದ ಸ್ತ್ರೀರೂಪದಿಂ |
ಪದುಳದಿಂ ಮೆಯ್ದಳೆದು ಎದ್ದು ಬರಲೇನೆಂಬೆ ಮೂಜಗವು ಬೆರಗಾದುದು|| ೧ || [೫೮]

**ಬೇಗಡೆ - ಆದಿ**
ಶ್ರೀಲಲಾಮನಂದು ಬಂದನು | ಮೋಹಿನಿಯ ರೂಪ |
ತಾಳಿ ಖಳರ ನಡುವೆ ಕಂಡನು ||
ಪೇಳಲೇನು ರೂಪ ಸಿರಿಯ | ಕಾಲಗೆಜ್ಜೆನಾದ ಧ್ವನಿಯ |
ಕೇಳಿ ಮೋಹಗೊಳಲು ಜಗವು |
ಖೂಳ ಖಳರು ಬೆರಗು ಪಡಲು || ೧ ||

ಮೇಲುಲೋಕದಿಂದ ಬಂದಳೊ | ಕುಡಿನೋಟ ಬೇರೆ |
ಕಾಲಗೆಜ್ಜೆನಾದ ಚಂದವೋ ||
ಲೋಲನಯನೆ ಮಂದಗಮನೆ |
ನೀಲವೇಣಿ ಮಧುರವಾಣಿ |
ಪೇಳಲೇನು ನಾಟ್ಯದಂದ |
ಖೂಳರೆಲ್ಲ ಮರುಳುಗೊಂಡ || ೨ ||

ನರ್ತಿಸುತ್ತ ಬರಲು ಮೋಹಿನೀ | ಮಯೂರದಂತೆ |
ವೃತ್ತಕುಚೆಯು ಮಂದಗಾಮಿನಿ ||
ದೈತ್ಯರೆಲ್ಲ ಬೆರಗುಪಟ್ಟು |
ಚಿತ್ತಕೆಟ್ಟು ಯೋಚಿಸುತ್ತ |
ನಿತ್ತರಲ್ಲಿ ಸುಧೆಯ ಮರೆತು |
ದಿಟ್ಟಿಸಲ್ಕೆ ಮನದಿ ಸೋತು || ೩ || [೬೧]

**ಭಾಮಿನಿ**
ನೀರಜಾಂಬಕಿ ನರ್ತಿಸುತ ವ |
ಯ್ಯಾರದಿಂದಲೆ ಖಳರ ಬಳಿ ಬರೆ |
ಓರೆನೋಟವ ಬೀರೆ ಮೋಹದ ಮಾಯೆ ವೈಭವವಾ ||
ಮಾರನರಸಿಯ ತೆರದಿ ರಂಜಿಪ |
ನಾರಿ ಮೋಹಿನಿ ಗೆಜ್ಜೆ ಝಲ್ಲೆನೆ |
ಮಾರಶರದುರಿಯಿಂದ ಬೆಂದಾ ದಾನವರ ನೋಡಿ || ೧ || [೬೨]

**ಸುರುಟಿ - ಏಕ**
ಯಾರೈ ನೀವೆಲ್ಲಾ | ಚಿಂತೆಗೆ |
ಕಾರಣವೇನೆಲ್ಲಾ ||
ನಾರಿಯಾದ ಯೆ | ನ್ನೊಡನದ ಪೇಳಿರಿ |
ದಾರಿಯ ನ್ಯಾಯದಿ | ತೋರುವೆನಿಂದಿಲಿ || ೧ ||

ದೈತ್ಯಪತಿಯು ನಾನೇ | ಬಲಿ ಆ |
ದಿತ್ಯರೊಡನೆ ನಾವೇ ||
ಅರ್ತಿಯಿಂ ಶರಧಿಯ | ಮಥಿಸಲು ಸುಧೆಯದು |
ಪ್ರಾಪ್ತವಾಗೆ ಅದ | ಪಡೆಯುವ ಯತ್ನವು || ೨ ||

ಸೇರುತ ಸುರರೊಡನೆ | ಮಥಿಸಲು |
ವಾರಿಧಿಯನು ನೀವೇ ||
ಭೂರಿ ಸಂತಸದೊಳು | ಹಂಚದೆ ಸುಧೆಯನು |
ಕಾರಣವೇನಿದೆ | ಜಗಳವಿದೇತಕೆ || ೩ ||

ವೀರತನದಿ ಸೆಳೆದು | ಸುಧೆಯನು |
ಶೂರರು ನಾವಿಂದು ||
ಈ ರೀತಿಯೊಳಿದ | ಸೇವಿಪ ಕಾಲಕೆ |
ಯಾರೈ ನೀನು ವಿ | ಚಾರಿಸಲೀ ಪರಿ || ೪ ||

ನಾನೇ ಮೋಹಿನಿಯು | ನರ್ತನ |
ಜಾಣೆ ವಿಶಾರದೆಯು ||
ಕ್ಷೋಣಿಯ ಜನರನು | ರಂಜಿಪೆನಾದರೆ |
ಚೂಣಿಯ ಸ್ಥಳವಿದು | ನರ್ತನವೆಲ್ಲಿಗೆ || ೫ ||

ಮಂದಗಮನೆ ಕೇಳೀ | ನರ್ತನ |
ದಿಂದ ಮೆರೆವ ಬಾಲೆ ||
ಚಂದದ ನರ್ತನ | ಕಾಣುವ ಆಸೆಯು |
ಸುಂದರಿ ನಮ್ಮಯ | ಬಿನ್ನಹ ನಿನ್ನಲಿ || ೬ || [೬೮]

**ಭಾಮಿನಿ**
ಚಂಚಲಾಕ್ಷಿಯೆ ನಿನ್ನ ನುಡಿಯಲಿ |
ವಂಚನೆಯ ಸುಳಿ ಕಾಣೆ ನೀನೇ |
ಹಂಚುವುದು ಸುಧೆಯನ್ನು ಸರಿಸಮನಾಗಿ ಉಭಯರಿಗೆ ||
ವಂಚಕಿಯು ನೀನಲ್ಲ ಮಾತಲಿ |
ಸಂಚ ಕಾಣೆವು ಮೋಹಿನಿಯೆ ನೀ |
ಸಂಚಿತಾರ್ಥದ ಸುಧೆಯ ಹಂಚುತ ನ್ಯಾಯ ಕೊಡಿಸುವುದು || ೧ || [೬೯]

**ಸೌರಾಷ್ಟ್ರ - ತ್ರಿವುಡೆ**
ದಾನವರೆ ನಾ ನಾರಿ ಚಂಚಲೆ |
ಗಾನ ನರ್ತನದಿಂದ ಬದುಕುವ |
ಮಾನಿನಿಯು ನಾನಿರಲು ನನ್ನನು | ಎಂತು ನಂಬುವಿರಿ || ೧ ||

ಮದನಮೋಹಿನಿ ನಾವು ಪಡೆದಿಹ |
ಸುಧೆಯ ಮೇಲಿನ ಆಣೆ ಒಪ್ಪಿಕೊ |
ಚದುರೆ ನಂಬುವುದೆಮ್ಮ ನೀನೇ | ಸುಧೆಯ ಹಂಚು || ೨ ||

ಇರದು ನಂಬುಗೆ ದೈತ್ಯಶ್ರೇಷ್ಠರೆ |
ಹರುಷದೊಳು ಕರ ತಟ್ಟಿ ಭಾಷೆಯ |
ನಿರದೆ ಕೊಟ್ಟರೆ ನನ್ನ ಒಪ್ಪಿಗೆ | ಇರುವುದೆನಲು || ೩ || [೭೦]

**ಭಾಮಿನಿ**
ಸುಧೆಯ ಕಲಶದ ಮೇಲಿನಾಣೆಯ |
ಮದಮುಖರು ಮಾಡುತ್ತಲಾದಿನ |
ಮುದದಿ ಕರವನೆ ತಟ್ಟಿ ನಂಬುಗೆ ಕೊಡಲು ಮೋಹಿನಿಯು ||
ಸುಧೆಯ ಕಲಶವ ಪಿಡಿದು ಪೇಳ್ದಳು |
ಉದಧಿ ಸ್ನಾನವ ಮಾಡಿ ಬನ್ನಿರಿ |
ಪದುಳದಿಂ ನರ್ತನಕೆ ಸಿದ್ಧತೆ ಮಾಳ್ಪೆನಷ್ಟರಲಿ || ೧ || [೭೩]

**ಕೇದಾರಗೌಳ - ಝಂಪೆ**
ಪದುಮಾಕ್ಷಿ ನುಡಿಯ ಕೇಳೀ | ಖಳರಂದು |
ಮುದದಿ ಸ್ನಾನವನೆ ಮಾಡಿ ||
ತ್ರಿದಶರನು ಕರೆಯುತಂದು | ಹಂಚುವಳು |
ಸುಧೆಯ ಮೋಹಿನಿಯು ಬಂದು || ೧ ||

ದೈತ್ಯರಾ ಸಾಲು ಮುಂದೆ | ನೋಡೆ ಆ |
ದಿತ್ಯರಾ ಸಾಲು ಹಿಂದೆ ||
ಸ್ವಸ್ಥದಿಂ ಕುಳಿತುಕೊಳ್ಳಿ | ಸುಧೆಯನಾ |
ನಿತ್ತಪೆನು ಮುದವ ತಾಳಿ || ೨ ||

ನರ್ತನದ ಗಾಯನವನು | ಹಾಡುತ್ತ |
ನರ್ತಿಸುವ ನಾರಿಯನ್ನು ||
ದಿಟ್ಟಿಸುತ ಮೆಯ್ ಮರೆತರು | ದೈತ್ಯರಾ |
ನರ್ತನಕೆ ಮನ ಸೋತರು || ೩ || [೭೬]

**ಸಾಂಗತ್ಯ - ರೂಪಕ**
ನರ್ತನ ಮಾಡುತ್ತ ವೃತ್ರಕುಚೆಯು ತಾನು |
ದೈತ್ಯರೆಡೆಗೆ ಬರುತಂದು ||
ಕೃತ್ರಿಮದಿಂದಲಿ ಸುರೆಯ ಹಂಚುತ ಬರೆ |
ದೈತ್ಯರೆಲ್ಲರು ಸುರೆ ಕುಡಿದು || ೧ ||

ಸುಧೆಯ ಪಾನವ ಮಾಡಿ ಅಮರರು ನಾವೀಗ |
ಎದುರಿಲ್ಲ ಜಗದಿ ನಮಗೆನುತ ||
ಮದಮುಖರಿರುತಿರೆ ಸುಧೆಯು ಸುರರಿಗಾಯ್ತು |
ಹದನವ ಪೇಳುವುದೆಂತು || ೨ || [೭೮]

**ವಾರ್ಧಕ**
ದೈತ್ಯಪಂಕ್ತಿಯೊಳಿದ್ದ ಸ್ವರ್ಭಾನು ದುರುಳನಾ |
ಮತ್ತಕಾಶಿನಿಯಲ್ಲಿ ಸಂಶಯವ ತಾಳುತ್ತ |
ಕೃತ್ರಿಮದಿ ಸುರರಂತೆ ಕಾಣಿಸುತ ಸುರಪಂಕ್ತಿಯಲ್ಲಿ ಕುಳ್ಳಿರಲು ಕಂಡು ||
ಧೂರ್ತನಿಗೆ ಸುಧೆ ಕೊಡಲು ರವಿಚಂದ್ರರದ ಕಂಡು |
ವೃತ್ರಕುಚೆಗಾಗ ಸಂಜ್ಞೆಯ ಮಾಡಿ ತಿಳಿಸಿದರೆ |
ದೈತ್ಯನಾ ಸುಧೆ ಕುಡಿದ ವೃತ್ತಾಂತ ತಿಳಿದಾಗ ಮೋಹಿನಿಯು ರೋಷದಿಂದಾ ||೧ || [೭೯]

**ಸೌರಾಷ್ಟ್ರ - ತ್ರಿವುಡೆ**
ದುರುಳ ಸ್ವರ್ಭಾನುವನು ಕಾಣುತ |
ಸರಸಿಜಾಂಬಕಿ ಕೆರಳಿ ತನ್ನಯ |
ಕರದಿ ಚಕ್ರವ ಪಿಡಿದು ಇತರರಿ | ಗರಿಯದಂತೆ || ೧ ||

ಶಿರವ ಛೇದಿಸೆ ಸುಧೆಯ ಕುಡಿದಾ |
ದುರುಳ ಶಿರವದು ರಾಹುವಾಯಿತು |
ಕರೆಯೆ ಮುಂಡವ ಕೇತುವೆಂದಾ | ಧರೆಯ ಜನರು || ೨ || [೮೧]

**ಕಾಂಭೋದಿ - ಝಂಪೆ**
ವರ ಸುಧೆಯ ಕುಡಿದ ಖಳ | ಶಿರಮುಂಡಗಳು ನೋಡೆ |
ಶರಧಿಯೊಳು ಪಶ್ಚಿಮದ ದೆಸೆಗೆ ||
ಭರದೊಳೋಲಾಡುತ್ತ | ತಿರುಗುತಿರೆ ಗರ್ಜನೆಗೆ |
ಸುರರೆಲ್ಲ ಬೆದರಿ ಮೋಹಿನಿಗೆ || ೧ ||

ಮೊರೆಯಿಡಲು ಮೋಹಿನಿಯು | ತೆರಳುತ್ತಲಾಕ್ಷಣದಿ |
ದುರುಳನನು ಬೆನ್ನಟ್ಟಿ ಬೇಗ ||
ಶಿರವ ಕರದೊಳು ಪಿಡಿದು | ಶೂಲದಿಂ ಮುಂಡವನು |
ಧರೆಗೆ ಕೆಡಹಿದಳು ರೋಷದಲಿ || ೨ ||

ದೈತ್ಯನ ಕಂಠನಾ | ಳದೊಳಿದ್ದ ಸುಧೆಯನ್ನು |
ಮತ್ತಕಾಶಿನಿ ತೆಗೆದು ಬಿಸುಡೇ ||
ಉತ್ತಮದ ಪ್ರವರ ಗೋ | ದಾವರೀ ಸಂಗಮದಿ |
ಬಿತ್ತು ಸುಧೆ ನದಿಯೊಳಗೆ ಸೇರೆ || ೩ || [೮೪]

**ಭಾಮಿನಿ**
ವರವ ಕೊಡೆ ಸ್ವರ್ಭಾನು ದೈತ್ಯಗೆ |
ಧರೆಯೊಳಗೆ ತವ ಶಿರವು ರಾಹುವು |
ಇರದೆ ಉಳಿದಾ ಮುಂಡ ಕೇತುವು ಧರೆಯೊಳಗೆ ಮುಂದೆ ||
ಪರಮನವಗ್ರಹರಲ್ಲಿ ಸೇರಿರಿ |
ತೊರೆದು ದೈತ್ಯರ ಕರ್ಮಬಂಧವ |
ದುರಿತ ನೀಗಿರಿ ಭಕ್ತಜನರಿಗೆ ಕಷ್ಟಪರಿಹರಿಸಿ || ೧ || [೮೫]

**ವಾರ್ಧಕ**
ಖಳರಿಂಗೆ ಸುರೆಯನ್ನು ಕುಡಿಸಿದಾ ಮೋಹಿನಿಯು |
ಉಳಿದ ಭಾಗವ ಪೃಥ್ವಿಗೆಸೆಯಲಿಕೆ ನದಿಯಾಗಿ |
ಇಳೆಯೊಳಗೆ ಮಧುಮತೀ ಪೆಸರಿಂದ ಹರಿಯಲ್ಕೆ ಮಹಾಲಸಾ ಗಿರಿ ಸನಿಹದಿ ||
ತಿಳಿಯಿರೈ ಮಧುಮತೀ ಪ್ರವರ ತೀರ್ಥಗಳೆರಡು |
ಕಲಿಯುಗದಿ ತೀರ್ಥಕ್ಷೇತ್ರಗಳಾಗಿ ಮಾರ್ಪಟ್ಟು |
ಕಳೆಯಿತೈ ಪಾಪರಾಶಿಯ ಜನರ ಕಲ್ಯಾಣವೆಸಗುತ್ತ ಮುದದಿಂದಲಿ || ೧ ||

ಅನಿತರೊಳು ಮೋಸಹೋದಾ ಬಲಿಯು ತಿಳಿದನಾ |
ವನಜಾಕ್ಷ ಕೃತ್ರಿಮವ ರೋಷವನೆ ತಾಳುತ್ತ |
ಅನಿಮಿಷರ ಕೂಡೆ ಕಾಳಗವ ಕೊಡೆ ಸೋತು ಶೋಣಿತಾಪುರಕೋಡಲು ||
ವನಜನಾಭನ ನೆನೆದು ಸುರರಿತ್ತ ಸಂಭ್ರಮದಿ |
ವಿನುತನಾಕದ ಸಿರಿಯ ಮರಳಿ ಅನುಭವಿಸುತ್ತ |
ಜನಪದಕೆ ಮಂಗಳವ ಕರುಣಿಸುತ ಮುಂಗಥೆಯನಾಲಿಸಿರಿ ಮುದದಿಂದಲಿ || ೨ || [೮೬]

**ಅಧ್ಯಾಯ ಮೂರು : ನೂಪುರಗಂಗೆ**

**ಕೇದಾರಗೌಳ - ಅಷ್ಟ**
ಪುಣ್ಯಪುರುಷ ದೇವ | ಚಿನ್ಮಯ ಮಾಧವ |
ಮನ್ಮಥಪಿತ ಕೇಶವ ||
ಪನ್ನಗಶಯನ ಸು | ಪರ್ಣವಾಹನ ಗುಣ |
ರನ್ನನ ವೈಭವವಾ || ೧ ||

ಸತ್ವಗುಣೋಪೇತ | ಭಕ್ತವತ್ಸಲ ಶತ |
ಪತ್ರಸಂಭವಜನಕ ||
ಉತ್ತಮ ವೈಕುಂಠ | ಪಟ್ಟಣದೊಳು ತನ್ನ |
ಪತ್ನಿಯ ಜೊತೆಗೂಡುತ || ೨ ||

ಶರಧಿಮಥನ ಮಾಡಿ | ಸುರರಿಗೆ ಸುಧೆಯನ್ನು |
ಹರುಷದೊಳಗೆ ಕೊಟ್ಟರೆ ||
ದುರುಳ ದೈತ್ಯರಿಗೆಲ್ಲ | ಸುರೆಯನ್ನು ಕುಡಿಸಿದ |
ದೊರೆ ತಮ್ಮ ಬಲು ಭಲರೇ || ೩ || [೯೦]

**ವಾರ್ಧಕ (ಅರ್ಧ)**
ಸಿದ್ಧಪುರುಷರೆ ಕೇಳಿ ಮುಂಗಥೆಯ ಮುದದಿಂ ಸ |
ಮುದ್ರಮಥನದ ಬಳಿಕ ಬರ್ದಿಲರು ಮುದದೊಳಿರೆ |
ರುದ್ರಸಖ ಹರಿಯೆಡೆಗೆ ಮುಂದಿನಾ ಬಗೆಗಾಗಿ ನಾರದನು ನಡೆತಂದಿರೆ || ೧ || [೯೧]

**ಭಾಮಿನಿ**
ಭೇದವೆಣಿಪರು ಹರಿಯು ಹರರೊಳು |
ಮೇದಿನಿಯ ಜನ ಕಲಿಯ ಕಾಲದಿ |
ವೇದ್ಯವಾಗೆ ಸಮುದ್ರಮಥನದಿ ಹರಿ ಹರರು ಒಂದೇ ||
ಹಾದಿತಪ್ಪುವ ಜನಕೆ ಮೋಹಿನಿ |
ಸಾಧನೆಯ ಮನದಟ್ಟು ಮಾಡುವ |
ಸಾಧ್ಯತೆಯ ಹುಡುಕುತ್ತ ನಾರದ ಹರಿಯ ಬಳಿ ಬರಲು || ೧ || [೯೨]

**ಮೇಚಕಲ್ಯಾಣಿ - ಅಷ್ಟ**
ಬಂದ ನಾರದ ಮುನಿಯ ತಾ ಕಂಡು | ಶ್ರೀಹರಿಯು ಬಲು ಆ |
ನಂದದಿಂದಲೆ ಮನದಿ ಮುದತಳೆದು ||
ಇಂದಿರೆಯ ಸಹಿತೆದ್ದು ತಾ ಕರೆ |
ತಂದು ಪೀಠವನಿತ್ತು ಪೂಜಿಸಿ |
ಮಂದಹಾಸದಿ ನುಡಿದ ನೀನೇ |
ಬಂದೆಯಾ ಆನಂದವಾಯಿತು || ೧ ||

ಮೂರು ಲೋಕವ ಗಮಿಪ ಮಹಮುನಿಪ | ಪುಣ್ಯಾತ್ಮ ನೀನಿರೆ |
ಕ್ಷೀರಸಾಗರದೆಡೆಗೆ ಬಂದಿರ್ಪ ||
ಕಾರಣವದೇನಿಹುದು ಕಲಿಯುಗ |
ಧಾರಿಣಿಯನಾವರಿಪ ಸಮಯದಿ |
ನಾರದನೆ ನೀ ಬಂದೆ ನೋಡಲು |
ಭೂರಿ ಚೋದಿಗವಾಂತೆ ಮನದಲಿ || ೨ ||

ಭೇದವೆಣಿಸುವರೆಲ್ಲ ಕಲಿಯುಗದೀ | ಹರಿ ಹರರ ನಡುವೆ ಪ್ರ |
ಭೇದವುಂಟೇ ಸ್ವಾರ್ಥಕಾರಣದಿ ||
ಮೇದಿನಿಯ ಜನ ಕೆಟ್ಟು ಪೋಪರು |
ಮಾಧವನೆ ಮೋಹಿನಿಯ ರೂಪದ |
ಸಾಧನೆಯು ಅಪರೂಪ ಜಗಕದು |
ವೇದ್ಯವಾಗಲಿ ತಿಳಿಯುವಂತೆಯೆ || ೩ ||

ನೂರುವರ್ಷದ ಬಾಳ್ವೆ ಕಲಿಯುಗದಿ | ಅದರೊಳಗೆ ರಾತ್ರಿಯು |
ಸೇರೆ ಉಳಿದೈವತ್ತು ಜೀವನದಿ ||
ಭೂರಿ ಬಾಲ್ಯವು ವೃದ್ಧ ಯೌವನ |
ಮೂರರಲಿ ಮೂವತ್ತು ವರುಷವು |
ಧಾರುಣಿಯ ಜನಕಿಹುದು ಬರಿ ಸಂ |
ಸಾರ ಇಪ್ಪತ್ತರಲಿಯೇನಿದೆ || ೪ ||

ಒಂದು ಪಾದದಿ ಧರ್ಮ ನಿಂದಿರಲು | ತ್ರೈಮೂರ್ತಿಗಳು ನೀ |
ವಂದು ಕಲ್ಲಾಗುತ್ತ ಮೆರೆದಿರಲು ||
ಮಂದಮತಿಗಳು ಶೀಘ್ರ ಕೋಪಿಗ |
ಳೆಂದು ಕರೆಯುವ ಕಲಿಯುಗದ ಜನ |
ತಂದೆ ತಾಯ್ಗಳ ಕಡೆಗಣಿಸಿ ತಾವ್ |
ಹೊಂದುವರು ಅಲ್ಪಾಯು ಜೀವನ || ೫ || [೯೭]

**ವಾರ್ಧಕ**
ಚಿತ್ತಜಯ್ಯನೆ ನೀನು ಶರಧಿಮಥನದ ಸಮಯ |
ದೈತ್ಯರನೆ ವಂಚಿಸಲು ಸ್ತ್ರೀರೂಪ ಧರಿಸಿ ಒಂ |
ಬತ್ತು ವಿಧ ನರ್ತನದಿ ಮರುಳಾಗೆ ದೈತ್ಯರಾ ಧರೆಗೆ ಮಂಗಳವಾದುದು ||
ನಿತ್ಯ ನೆನೆಯಲು ಬೇಕು ಕಲಿಯುಗದ ಜನರೆಲ್ಲ |
ವ್ಯರ್ಥವಾಗದ ತೆರದಿ ಮೋಹಿನಿಯ ಅವತಾರ |
ಭಕ್ತರಾ ಹೃದಯದೊಳು ಚಿರಸ್ಥಾಯಿಯಾಗಿರಲಿ ಪ್ರಾರ್ಥಿಸುವೆ ನಿನ್ನೊಳೆಂದ || [೯೮]

**ಭಾಮಿನಿ**
ನೀರಮೇಲಣ ಗುಳ್ಳೆಯಂದದಿ |
ತೋರುವಾ ಕಲಿಕಾಲ ಬಲುಗಂ |
ಭೀರ ಹಾಹಾಕಾರ ಮನುಕುಲಕೆಲ್ಲ ಮಾರಕವು ||
ತೋರು ದಯವನು ಹರಿಯೆ ಜಗದು |
ದ್ಧಾರಕನು ನೀನಿರಲು ಮುಂದಿನ |
ದಾರಿ ಪೇಳ್ವುದು ಕಲಿಯ ಭಯವನು ಇಳೆಗೆ ತಪ್ಪಿಸಲು || ೧ || [೯೯]

**ಸುರುಟಿ - ಏಕ**
ಚಿಂತೆಯ ಬಿಡು ಮುನಿಯೆ | ಜಗಕತಿ |
ಸಂತಸ ವಿಷಯವನೆ ||
ಕಂತುಪಿತನು ತ್ರಿಪು | ರಾಂತಕರೆಮ್ಮೊಳು |
ಅಂತರವಿರದು ನಿ | ರಂತರ ತಿಳಿವುದು || ೧ ||

ಹರಿ ಹರರೊಂದಾಗಿ | ಮುಂದಕೆ |
ಚರಿತೆ ನಡೆವ ತೆರದಿ ||
ನಿರತವು ಮಾಳ್ಪೆವು | ಮೋಹಿನಿಭಕ್ತರು |
ಧರೆಯೊಳಗಪ್ಪರು | ಕಲಿಯುಗದೊಳು ನಿಜ || ೨ || [೧೦೧]

**ಭಾಮಿನಿ**
ನಾರದನೆ ಬಿಡು ಭಯವ ಜಗದು |
ದ್ಧಾರಕರು ನೀವಿರಲು ಮುಂದಿನ |
ದಾರಿ ಪೇಳ್ವೆವು ಹರಿ ಹರರು ಒಂದಾಗಿ ಚಿಂತಿಸುವ ||
ಸಾಕು ನಾರಾಯಣನ ನಾಮವ |
ಧಾರುಣಿಯ ಕಲಿಕಾಲದಲಿ ಬಹ |
ಕ್ರೂರ ಆಪತ್ತುಗಳ ನೀಗಿಸಿ ಸಂತಸವ ಕೊಡುವ || ೧ || [೧೦೨]

**ಕಾಂಭೋದಿ - ಝಂಪೆ**
ಇತ್ತಲಾ ಶೈಮಿನಿಯ | ಪತ್ತನದಿ ಇನಸೂನು |
ಇತ್ತನೋಲಗವ ವಿಭವದೊಳು ||
ಉತ್ತಮದ ಸಿಂಹ ವಿ | ಷ್ಟರದಿ ತಾ ಕುಳ್ಳಿರಲು |
ಚಿತ್ರಗುಪ್ತನ ಸಹಿತಲಾಗ || ೧ ||

ಪಾಪಿಗಳು ತಾ ಗೈವ | ಪಾಪಕಾರ್ಯಂಗಳಿಗೆ |
ಲೋಪಬಾರದ ತೆರದಿ ಶಿಕ್ಷೆ ||
ಆಪರೇತಾಧಿಪನು | ನೀಡುತ್ತ ಬಂದಿರಲು |
ಶ್ರೀಪತಿಯ ನೇಮದಿಂದಂದು || ೨ ||

ಹೆಂಡತಿಯ ಕೊಂದವರ | ಗಂಡನನು ಬಿಟ್ಟವರ |
ಉಂಡಮನೆ ದ್ರೋಹ ಬಗೆದವರಾ ||
ಪುಂಡಕಾಕರ ದೊಡ್ಡ | ಹಿಂಡೆ ನೆರೆದಿರಲಲ್ಲಿ |
ದಂಡಿಸಿದ ಇನಸೂನು ಬಿಡದೆ || ೩ ||

ಒಂದು ದಿನ ಯಮನೆಡೆಗೆ | ಬಂದ ನಾರದಮುನಿಪ |
ಚಂದದಿಂ ಕಂಡು ಇನಸೂನು ||
ಸುಂದರದ ವಿಷ್ಟರದಿ | ಕುಳ್ಳಿರಿಸಿ ಮುನಿಪನಿಗೆ |
ವಂದಿಸುತ ಹೇಳಿದನು ಇನಜ || ೪ ||

ಮೂರು ಲೋಕವನು ಸಂ | ಚಾರಿಸುವ ಮಹಮುನಿಯೆ |
ಭೂರಿಸಂತಸವಾಂತೆ ಕಂಡು ||
ಕಾರಣವ ಪೇಳು ಕೃಪೆ | ದೋರಿಯೀ ಭಕ್ತನೊಳು |
ಕ್ಷೀರಸಾಗರಶಯನ ಶರಣ || ೫ || [೧೦೭]

**ಬಿಲಹರಿ - ಅಷ್ಟ**

ಯಮರಾಜ ಕೇಳಯ್ಯ ನೀನು | ನಿನ್ನ |
ಕ್ರಮವ ಪೇಳುವೆನೆಂತು ಪಾಪ ಪುಣ್ಯವನು ||
ಗಮನಿಸಿ ಶಿಕ್ಷಿಸೆ ಜನರಾ | ಸರಿ |
ಸಮರಾರು ಕಾಣೆನು ನಿನ್ನ ಪೋಲುವರ || ೧ ||

ತುಲನೆ ಮಾಡುತ ಧರ್ಮಾಧರ್ಮ | ಜೀವಿ- |
ಗಳ ಶಿಕ್ಷಿಪುದು ನೋಡೆ ಬಲು ದೊಡ್ಡ ಕರ್ಮ ||
ಅಳಿದ ಜೀವಿಯು ಇಲ್ಲಿ ಬರಲು | ನೀನು |
ಸಲೆ ಶಿಕ್ಷೆ ಕೊಡುತಲೆ ಧರ್ಮ ಉಳಿಸಿರಲು || ೨ ||

ಪಾಪಪುಣ್ಯವ ನೋಳ್ಪ ನೀನು | ನಿನ್ನ |
ಪಾಪಪುಣ್ಯದ ಲೆಕ್ಕ ಮಾಡಿದೆಯೇನು ||
ಲೋಪವಾಗಿರೆ ಧರ್ಮಕೀಗ | ನೀನೇ |
ಪಾಪಿಯಾಗಿರಲು ಪರಿಹಾರ ನೋಡೀಗ || ೩ ||

ತಪ್ಪುಗಳಾಗೆ ನಿನ್ನಲ್ಲಿ | ಅದ |
ಒಪ್ಪಿಕೊಳ್ಳಲು ಬೇಕು ಪುಣ್ಯಾತ್ಮನಲ್ಲಿ ||
ಇಪ್ಪ ಲಕ್ಷಣವು ನೋಡೆಂದ | ಬಂ |
ದಿಪ್ಪ ಪಾಪಕೆ ಯೇನು ನೋಡಿಕೊ ಕಂದ || ೪ || [೧೧೧]

**ವಾರ್ಧಕ**

ಭಕ್ತಮಾರ್ಕಂಡೇಯ ಕತೆಯದೇನಾಯ್ತು ಆ |
ಋತ್ವಿಜೋತ್ತಮನಾದ ಮಾಂಡವ್ಯ ಮುನಿಶಾಪ |
ತಟ್ಟಿರಲು ನಿನಗೆ ಸಾವಿತ್ರಿಯಾ ಕಥನದೊಳು ಲೋಪಗಳು ಎಷ್ಟೊ ನೋಡೆ ||
ಶಕ್ತಿಯುಡುಗಿದೆ ನಿನ್ನ ಮುಂದೆ ಈ ಕಾರ್ಯಪು |
ವೃತ್ತನಾಗಲು ಯೋಗ್ಯವಲ್ಲ ನೀನದರಿಂದ |
ಎಚ್ಚರಿಸಿದೆನು ಮುಂದೆ ಪಾಪನೀಗುವ ಬಗೆಗೆ ಯೋಚಿಸೈ ಗಂಭೀರದಿ || ೧ || [೧೧೨]

**ಭಾಮಿನಿ**
ಪಾಪಿಯಾಗಿಹೆ ಶಿಕ್ಷೆಯೊಳು ಬಲು |
ಲೋಪವಾಗಿದೆಯೆನಲು ನಾರದ |
ಆಪರೇತಾಧಿಪನು ದುಃಖಿಸಿ ಮುನಿಯ ಪದಕೆರಗಿ ||
ಕೋಪದೊಳು ನಿರ್ಣಯವ ಮಾಡಲು |
ಲೋಪ ಸಹಜವು ಒಪ್ಪಿಕೊಂಡೆನು |
ಶ್ರೀಪತಿಯ ನಿಜಭಕ್ತ ಪೇಳ್ವೈ ದಾರಿ ತೋರುವುದು || ೧ || [೧೧೩]

**ಕೇದಾರಗೌಳ - ಅಷ್ಟ**
ಭಾನುನಂದನ ನೀನು | ಮಾನನಿಧಿಯು ನಿಜ |
ನಾನಿಹೆ ಬೆದರದಿರು ||
ತ್ರಾಣಗುಂದಿರೆ ನಿನ್ನ | ಮರಳಿ ಪಡೆವ ಯತ್ನ |
ಜಾಣನೆ ಮಾಡುವುದು || ೧ ||

ಭಕ್ತವತ್ಸಲ ಪುರು | ಷೋತ್ತಮನನೆ ನೀನು |
ನಿಶ್ಚಲ ತಪದಿಂದಲಿ ||
ಅರ್ತಿಯಿಂದೊಲಿಸಲು | ಮತ್ತೆ ನೀ ಪಡೆಯುವೆ |
ಶಕ್ತಿಯ ಈ ಕಾರ್ಯದಿ || ೨ ||

ಪೊರಡು ಶೈಮಿನಿಪುರ | ತೊರೆದೀಗರಾವಳಿ |
ಪರ್ವತದೊಳು ತಪವಾ ||
ತ್ವರಿತದಿ ಮಾಳ್ಪುದು | ಕ್ಷೇಮವಪ್ಪುದು ಎಂದು |
ಹರಸುತ್ತ ತೆರಳಿದರೆ || ೩ || [೧೧೬]

**ಕಾಂಭೋದಿ - ಝಂಪೆ**
ಬಂದ ಇನಸೂನು ತಪ | ಕೆಂದು ಕಾನನದೆಡೆಗೆ |
ಮಂದಿಮಾರ್ಬಲ ತೊರೆದು ಬೇಗಾ ||
ಇಂದಿರೇಶನನೊಲಿಸೆ | ಅರಾವಳಿ ಬೆಟ್ಟದೆಡೆ |
ಚಂದದೊಳು ನಡೆತಂದನಾಗ || ೧ ||

ತನುಶುದ್ಧ ಮಾಡಿ ಸ್ನಾ | ನವ ಮಾಡಿ ಮುದದಿಂದ |
ಇನಜಾತ ತಪಕೆ ನಿಂದಿರಲು ||
ಮನವನೇಕಾಗ್ರತೆಯೊಳ್ | ನಿಲಿಸುತ್ತ ಹರಿಯನ್ನೆ |
ಘನತಪದೊಳೊಲಿಸಬೇಕೆನಲು || ೨ ||

ಕಳೆಯೆ ಸಾವಿರ ವರ್ಷ | ಕಠಿಣ ತಪದೊಳಗೆ ಯಮ |
ನಳಿನನಾಭನ ತಪದೊಳಿರಲು ||
ತಿಳಿದನೀ ಹದನವನು | ನಳಿನನಾಭನು ಅಂದು |
ಇಳೆಯ ಕಲ್ಯಾಣ ಬಯಸಿರಲು || ೩ || [೧೧೯]

**ಭಾಮಿನಿ**
ಘೋರತಪಕುರೆ ಮೆಚ್ಚಿ ಹರಿ ಮೈ |
ಯ್ದೋರೆ ವೃಷಭದ ರೂಪಿನೊಳು ಮಾ |
ರಾರಿವಾಹನ ಅದರ ಕಾಲೊಳು ನೂಪುರವು ಮೆರೆಯೆ ||
ಮಾರಪಿತ  ತಾ ಮೋಹಿನಿಯ ಅವ |
ತಾರದೊಳು ಧರಿಸಿದ್ದ ಗೆಜ್ಜೆಯ |
ಭೂರಿ ನಾದವು ಕೇಳೆ ಇನಜನು ಅದನೆ ದಿಟ್ಟಿಸುತ || ೧ || [೧೨೦]

**ಸೌರಾಷ್ಟ್ರ - ತ್ರಿವುಡೆ**
ನೂಪುರವ ದಿಟ್ಟಿಸುತ ಇನಜನು |
ಶ್ರೀಪತಿಯ ತಪಮಾಡೆ ಭಕ್ತಿಗೆ |
ಪಾಪ ತೊಲಗಿತು ಗೆಜ್ಜೆ ಕರಗಿತು | ಹರಿಯೆ ನದಿಯಾಗಿ || ೧ ||

ಭಾನುಸುತ ತಪಕಂದು ಮೆಚ್ಚುತ |
ಕಾಣಿಸುತ ಶ್ರೀಹರಿಯು ನುಡಿದನು |
ಮಾನನಿಧಿ ಬಿಡು ತಪವ ಮೆಚ್ಚಿದೆ | ನಾನೆ ಬಂದೆ || ೨ ||

ಹರಿವ ನದಿಯನು ನೋಡು ನೂಪುರ |
ಕರಗಿ ನೀರಾಗುತ್ತ ಹರಿಯಿತು |
ಕರೆಯೆ ನೂಪುರಗಂಗೆಯೆನುತಲೆ | ಧರೆಯ ಜನರು || ೩ || [೧೨೩]

**ಭಾಮಿನಿ**
ಭಾನುನಂದನ ನೀನು ನದಿಯೊಳು |
ಸ್ನಾನವನು ಗೈಯುವುದು ಪಾಪವು |
ಶ್ಯಾನೆ ತೊಲಗಿರಲೆಂದು ಮುಂದಿನ ಕಾರ್ಯಮಾಡುವುದು ||
ಕ್ಷೋಣಿ ಜನರಾ ಪಾಪ ತೊಲಗಿಪ |
ತಾಣವಾಗುತ ಮೆರೆವುದಿಲ್ಲಿಯೆ |
ನಾನೆ ನೆಲಸುವೆ ಕಲಿಯುಗದಿ ಅಭಿಷೇಕ ಇದರಿಂದ || ೧ || [೧೨೪]

**ಸುರುಟಿ - ಏಕ**
ಧನ್ಯನಾದೆ ದೇವ | ಮಾಧವ |
ನಿನ್ನ ಭಕ್ತರ ಕಾವ ||
ಘನ್ನ ಬಿರುದ ನೀ | ನಿಂದು ಉಳಿಸಿದೆಯ |
ಪುಣ್ಯವಂತ ನಾ | ನಿನ್ನ ಕಾರಣದಿ || ೧ ||

ನೂಪುರ ಗಂಗೆಯಿದು | ಜನರಾ |
ಪಾಪವ ಕಳೆಯುವುದು ||
ಆಪರೇತಾಧಿಪ | ನಾನೇ ಸಾಕ್ಷಿಯು |
ಲೋಪವಿಲ್ಲ ಕಲಿ | ಗಾಲದಿ ನೋಡಲು || ೨ || [೧೨೫]

**ಅಧ್ಯಾಯ ನಾಲ್ಕು: ಪಶುಪತಿ ಕ್ಷೇತ್ರಮಹಾತ್ಮೆ**

**ವಾರ್ಧಕ**
ಪುಣ್ಯಪುರುಷರು ಕೇಳಿ ಘನ್ನ ಭಾರತಯುದ್ಧ |
ವನ್ನು ಪೂರೈಸಿ ಹಸ್ತಿನಪುರದ ಒಡೆತನವ |
ಸನ್ಮತದಿ ಪಡೆದು ಧರ್ಮಜನು ಮುದದೊಳಗಿರಲು ಅನುಜರನು ಕೂಡಿಕೊಂಡು ||
ಘನ್ನ ವಿಷ್ಟರವೇರಿ ಮೆರೆದಿದ್ದನೋಲಗದಿ |
ಚಿನ್ಮಯನ ಧ್ಯಾನಿಸುತ ಕುಳಿತಿರಲು ನಾರದನು |
ನಿರ್ಣಯದ ಘಟ್ಟ ಬಂದಿತು ಕಥನಕೆಂದೆನುತ ಯಮಜನೆಡೆ ನಡೆತಂದನು || ೧ || [೧೨೬]

**ಬೇಗಡೆ - ರೂಪಕ**
ಬ್ರಹ್ಮಮಾನಸಪುತ್ರ ನಾರದನ | ಕಾಣುತ್ತ ಹರುಷದಿ |
ಧರ್ಮನಂದನ ದೇವಮುನಿಯನ್ನಾ ||
ಸನ್ಮತದಿ ಕರೆತಂದು ಕೂರಿಸಿ |
ಬೊಮ್ಮಪುತ್ರನ ಕೂಡೆ ಪೇಳಿದ |
ನಿಮ್ಮ ದರ್ಶನ ಹರ್ಷದಾಯಕ |
ನಮ್ಮ ಪುರ ಪಾವನವದಾಯಿತು || ೧ ||

ಹಸ್ತಿನಾಪುರದಧಿಪ ನಾನಿರುವೆ | ನೋಡಲಿಕೆ ಮನಸಿಗೆ |
ಅಸ್ಥಿರವು ಕಾಡುತ್ತಲಿರೆ ನೀವೇ ||
ಇತ್ತ ಬಂದಿರಿ ಧನ್ಯನಾದೆನು |
ಮತ್ತೆ ನಮ್ಮಿಂದಾವ ಕಾರ್ಯವು |
ಯಿತ್ತು ಪ್ರೇಮವ ಪೇಳಿರೈ ಅದ |
ಚಿತ್ತಶುದ್ಧದಿ ನಡೆಸಿಕೊಡುವೆನು || ೨ ||

ಏನನೆಂಬೆನು ಧರ್ಮನಂದನನೆ | ಮುನಿಗಳಿಗೆ ಕಾರ್ಯವ |
ದೇನುಯಿರುವುದು ನಮಗೆ ನಿಮ್ಮೊಡನೆ ||
ಮಾನನಿಧಿ ನೀನಿರಲು ನಿನ್ನನು |
ಕಾಣಲೆಂದೇ ಬಂದೆನಾದರೆ |
ನಾನು ಪೇಳ್ವ ವಿಚಾರ ನಿಮ್ಮಯ |
ಚೂಣಿಯೊಳು ಬಂದಿಪ್ಪ ದೋಷವು || ೩ ||

ಭ್ರಾತೃಹತ್ಯಾದೋಷ ತಟ್ಟಿರಲು | ನಿನ್ನವರ ಕೊಲ್ಲುತ |
ಹಸ್ತಿನಾಪುರ ಪೀಠವೇರಿರಲು ||
ಸತ್ಯಧರ್ಮವ ಬಿಡದ ವರಪುರು |
ಷೋತ್ತಮನು ನೀನಿರಲು ಸ್ವಾರ್ಥದಿ |
ವಾಸ್ತವವ ಮರೆತೀಗ ಕುಳ್ಳಿರೆ |
ಎಚ್ಚರಿಸೆ ನಾ ಬಂದೆ ಕೇಳೈ || ೪ ||

ಕರುಣನಿಧಿ ಅವಧರಿಸು ಅನುನಯದಿ | ಈ ದೋಷ ನೀಗಲು |
ಅರುಹು ಪರಿಹಾರವನೆ ನೀ ಜವದಿ ||
ಧುರದಿ ಕ್ಷತ್ರಿಯಪಂಥದಂತೆಯೆ |
ಕುರುಕುಲದ ನಾಶವನು ಮಾಡಿರೆ |
ಹರಿಯು ಪೇಳ್ವನೆ ದೋಷ ನೀಗುವ |
ಪರಮಪಾವನವಾದ ಹಾದಿಯ || ೫ || [೧೩೨]

**ಭಾಮಿನಿ**
ಆಗದಾಗದು ಹರಿಯು ಯುದ್ಧದಿ |
ಭಾಗಿಯಾಗಿರೆ ನಿಮ್ಮ ದೋಷವ |
ನೀಗಲಾರನು ಚಿನ್ಮಯನು ಅವ ಧುರಕೆ ಕಾರಣನು ||
ನಾಗಭೂಷಣನನ್ನು ಕೇಳಿಕೊ |
ಯೋಗ್ಯ ಪರಿಹಾರವನು ಪೇಳುವ |
ಬೇಗನೈದುವುದವನ ಹುಡುಕುತ ನೀವು ಪೋಗುವುದು || ೧ || [೧೩೩]

**ಸೌರಾಷ್ಟ್ರ - ತ್ರಿವುಡೆ**
ಬ್ರಹ್ಮಮಾನಸಪುತ್ರ ತೆರಳಲು |
ಧರ್ಮನಂದನ ಮನದಿ ಚಿಂತಿಸಿ |
ತಮ್ಮ ಭೀಮನ ಕರೆಯೆ ಬಂದನು | ಅಣ್ಣನೆಡೆಗೆ || ೧ ||

ಕರೆದೆಯೇನೈ ಅಣ್ಣಯೆನ್ನನು |
ಇರುವ ಕಾರ್ಯವದೇನು ಪೇಳ್ವುದು |
ಧುರದಿ ಕೌರವರನ್ನು ಮರ್ದಿಸಿ | ಮರೆದಿರಲ್ಕೆ || ೨ ||

ಧರ್ಮನಂದನನೆಂದ ಭೀಮನೆ |
ಧರ್ಮಸಮ್ಮತವಲ್ಲ ಕಾರ್ಯವು |
ನಮ್ಮವರನೇ ಕೊಂದು ಕುಳಿತಿರೆ | ಸುಮ್ಮನಿಂತು || ೩ ||

ಭ್ರಾತೃಹತ್ಯಾದೋಷ ಬಂದಿದೆ |
ಘಾತಿಸಿರೆ ಅಗ್ರಜರ ಅನುಜರ |
ಸೂತ್ರಧಾರಿಯು ಕೃಷ್ಣನಿರೆ ಅಸ | ಮರ್ಥ ಪರಿಹರಿಸೆ || ೪ ||

ನಾಗಭೂಷಣನೊಲಿಸಿ ತಪದೊಳು |
ನೀಗಬೇಕೀ ದೋಷವೆಲ್ಲವ |
ಬೇಗನೈದುವ ಹರನ ಅರಸುತ | ಘೋರ ವನಕೆ || ೫ || [೧೩೮]

**ಕೇದಾರಗೌಳ - ಅಷ್ಟ**
ಅರಿತು ಶಂಕರನಿಂದು | ಸುಲಭದಿ ಒಲಿಯದೆ |
ಇರಲು ನಿರ್ಧರಿಸಿ ದೇವ ||
ಶರಣರ ಅರಿವಿಗೆ | ಬರದಂತೆ ಇರುತಿರೆ |
ಪರಮ ಕೈಲಾಸದಲಿ || ೧ ||

ಹುಡುಕುತ್ತ ಪೊರಟರೆ | ಮೃಡ ಕಾಣದಿರಲಂದು |
ಅಡವಿಯೊಳ್ ಪಾಂಡವರು ||
ಕಡೆಗು ಕಂಡನು ಭೀಮ | ಮೃಡನಂಶಸಂಭೂತ |
ಬಿಡದೆ ಬೆಂಬತ್ತಿದರೆ || ೨ ||

ಸುತ್ತಿದ ಜಗವನ್ನು | ಕೃತ್ತಿವಾಸನು ಭೀಮ |
ದೃಷ್ಟಿಗೆ ಬೀಳದಂತೆ ||
ಎಚ್ಚರದಿಂದಲಿ | ತಪ್ಪಿಸುವಾ ನಡೆ |
ವ್ಯರ್ಥವಾಯಿತು ನೋಡಲು || ೩ || [೧೪೧]

**ಭಾಮಿನಿ**
ಭೀಮಸೇನನ ಗೃಧ್ರದೃಷ್ಟಿಯು |
ಕಾಮಹರನನು ಬೆಚ್ಚಿಬೀಳಿಸೆ |
ಆ ಮಹಾಶಿವ ಭೀಮಸೇನನ ಮನದಿ ಪೊಗಳುತಲೇ ||
ಕ್ಷೇಮದಿಂದಡಗುವರೆ ಸುಸ್ಥಳ |
ವ್ಯೋಮಕೇಶನು ಅರಸಿ ಬಂದರೆ |
ಈ ಮಹಿಯ ಹಿಮಪರ್ವತದ ತೀರದಲಿ ಲೀಲೆಯೊಳು || ೧ || [೧೪೨]

**ಆರ್ಯಸವಾಯ್ - ಆದಿ**
ಪಶುಪಾಲಕರಾ ಕುಶಲದಿ ಪೊರಟರೆ |
ಪಶುಗಳ ಹಿಂಡನು ಸೇರಿಸುತ ||
ರಸೆಯೊಳು ನಲಿಯುತ ಉಲಿಯುವ ಮಾತಿಲಿ |
ಬಸವಳಿಯದೆ ಬಂದರು ನಗುತ || ೧ ||

ಕೋಲನು ಪಿಡಿಯುತ ಡೋಲನು ಬಾರಿಸಿ |
ಲೀಲೆಯೊಳ್ ಕೊಳಲನ್ನೂದುತಲಿ ||
ಲೇಲೇ ಹಾಕುತ ಕುಣಿಯುತಲಾ ಗೋ |
ಪಾಲರು ಬಂದರು ವಹಿಲದಲಿ || ೨ ||

ನಿಶೆಯನು ಕಳೆವರೆ ಪಶುಗಳ ಹಿಂಡನು |
ಪಶುಪಾಲಕರಾ ದಿನ ಮುದದಿ ||
ಕೊಸರುವ ಪಶುಗಳ ಬೆದರಿಸಿ ಒಂದಾ |
ಗಿಸುತಲೆ ಮರದಡಿ ಕಾನನದಿ || ೩ || [೧೪೫]

**ಸೌರಾಷ್ಟ್ರ - ತ್ರಿವುಡೆ**
ಕಂಡನಾ ತ್ರಿಪುರಾಂತಕನು ಪಶು |
ಹಿಂಡು ನಿದ್ರಿಸೆ ಮರದ ಬುಡದೊಳು |
ಅಂಡಲೆವ ಶ್ರಮ ತಪ್ಪಿತೆನಗೀ | ಹಿಂಡಿನೊಳಗೆ || ೧ ||

ಪಶುವ ರೂಪವ ತಾಳಿ ಮೃಗಧರ |
ಕುಶಲದಿಂ ಗೋಹಿಂಡ ಮಧ್ಯದಿ |
ರಸೆಯ ಜನರಿಗೆ ಕಾಣದಂತೆಯೆ | ಅಡಗಿಕೊಂಡು || ೨ ||

ಸೇರುವೆನು ಪಾತಾಳಲೋಕವ |
ವೀರನಾಗಿಹ ವಾಯುಪುತ್ರನ |
ಕ್ರೂರದೃಷ್ಟಿಗೆ ಬೀಳದಂತೆಯೆ | ಕೊರೆಯೆ ರಸೆಯ || ೩ ||

ಪಶುಸಮೂಹವ ಕಂಡ ದೇವನು |
ಕುಶಲದಿಂದಲೆ ತಪ್ಪಿಸಿದನೇ |
ಪಶುಹೃದಯವನರಿತಿದ್ದ ನಕುಲನ | ಕರೆದು ಭೀಮ || ೪ ||

ತೋರಿಪುದು ನೀನಿಂದು ಬೇಗದಿ |
ಮಾರವೈರಿಯು ಅಡಗಿಕೊಂಡಿರೆ |
ತೋರುವಾ ಪಶುಹಿಂಡ ಮಧ್ಯದೊ | ಳಿರುವನೆಂದು || ೫ ||

ತೋರಿಸಿದರಾ ನಕುಲ ಕಂಡನು |
ಧಾರಿಣಿಯ ಕೊರೆಯುತಿಹ ಪಶುವನೆ |
ಗಾರುಗೆಡಿಸುವೆನೆಂದು ಬಗೆದಾ | ವೀರಭೀಮ || ೬ || [೧೫೧]

**ವಾರ್ಧಕ**
ಘೋರ ಹೂಂಕಾರವನು ತೆಗೆದರಾ ಭೀಮನು ಶ |
ರೀರವನು ಹಿಗ್ಗಿಸಲು ಬಾನಿನೆತ್ತರಕೆ ಬಳಿ |
ಕಾರುಭಟಿಸುತ ನಿಲಲು ಎರಡು ಕಾಲ್ಗಳ ಮಧ್ಯೆ ಪಶುಹಿಂಡು ಬಂಧಿಯಾಗೆ ||
ತೋರುವಾ ಪಶುವಿನಾ ಬೆನ್ನ ಮೂಳೆಯ ಪಿಡಿದು |
ಭಾರಿ ಆವೇಶದಿಂ ಗಗನಕದ ಚಿಮ್ಮಿಸಲು |
ಮೂರು ತುಂಡಾಗುತಲೆ ಪಶು ತಲೆಯು ನೇಪಾಲ ಭೂಪ್ರದೇಶದಿ ಬೀಳಲು || ೧ || [೧೫೨]

**ಸೌರಾಷ್ಟ್ರ - ತ್ರಿವುಡೆ**
ದೇವದುಂದುಭಿ ಮೊಳಗುತಿರಲಾ |
ಭಾವಜಾರಿಯು ಕಂಡನಲ್ಲಿಯೆ |
ಭಾವಶುದ್ಧದಿ ಮಣಿದ ಕುಂತಿಯ | ಜಾತರಿಂಗೆ || ೧ ||

ಮೆಚ್ಚಿದೆನು ಧರ್ಮಜನೆ ನಿನ್ನಯ |
ಭಕ್ತಿಭಾವಕೆ ಬಳಿಕ ಭೀಮನ |
ಹೆಚ್ಚಿನಾ ಶಕ್ತಿಯನು ಕಂಡಿರೆ | ತೃಪ್ತಿಯಾಯ್ತು || ೨ ||

ಪಶುಪತಿಯು ನಾನಾಗಿ ತೋರುವೆ |
ಎಸೆವ ನೇಪಾಳದೊಳು ಮುಂದಕೆ |
ಕುಶಲದೊಳು ಜಾಗ್ಮತಿಯ ನದಿ ಬಳಿ | ಹಿತದೊಳಿಹೆನು || ೩ || [೧೫೫]

**ವಾರ್ಧಕ**

ಪಶುಹತ್ಯೆ ಭಾತೃಹತ್ಯದ ದೋಷ ನೀಗಿದವು |
ಕುಶಲದಿಂ ಜಾಗ್ಮತೀ ನದಿಸ್ನಾನವನು ಮಾಡೆ |
ಪಶುಪತಿಯ ನೀವಿಂದು ಕಂಡಿರೈ ಮುಂದಕೀ ಕಲಿಯುಗದಿ ಈ ದರ್ಶನ ||
ರಸೆಯೊಳಗೆ ಮೆರೆವ ಅತಿ ಶ್ರೇಷ್ಠವಾದಂತ ದ್ವಾ |
ದಶ ಜ್ಯೋತಿರ್ಲಿಂಗವನು ಕಂಡ ಫಲವೀಯುವುದು |
ವಸುಮತೀಶನೆ ಮುಂದೆ ಭೀಮನಿಗೆ ಮಹಕಾರ್ಯ ಇರುವುದೈ ಮರುಜನ್ಮದಿ || ೧ ||

ಧರ್ಮ ಸಂಸ್ಥಾಪನಾಚಾರ್ಯನುರೆ ಕಲಿಯುಗದಿ |
ಧರ್ಮನಂದನ ನೀನು ಹಸ್ತಿನಾಪುರದೊಳಗೆ |
ಧರ್ಮದಿಂ ರಾಜ್ಯಭಾರವ ಮಾಡು ನಿಶ್ಚಿಂತನಾಗು ಪೋಗೆಂದೆನ್ನಲು ||
ಕರ್ಮನಿಷ್ಠನು ಬಂದ ದಂತಿಪುರಕಾ ದಿನದಿ |
ತಮ್ಮಂದಿರನು ಕೂಡಿ ರಾಜ್ಯಭಾರವ ಮಾಡೆ |
ಒಮ್ಮೆ ಯೋಚಿಸಿದ ಶಿವ ಕಲಿಕಾಲ ಬಂದಿತೈ ಹರಿಯನ್ನು ಕರೆವೆನೆನುತ || ೨ || [೧೫೭]

**ಅಧ್ಯಾಯ ಐದು : ಕಲಿಯುಗದ ಮಹಾಲಸಾ ನಾರಾಯಣಿ**

**ಭಾಮಿನಿ**

ಒಂದು ಪಾದದ ಧರ್ಮ ಕಲಿಯುಗ |
ಚಂದ್ರಶೇಖರನನ್ನು ಬಾಧಿಸೆ |
ಕಂದುಗೊರಳನು ಅಂದು ಮಾನವರಂತೆ ಮದದಿಂದಾ ||
ಹೊಂದೆ ಕಾಯಾ ತರುವ ದೇವನ |
ದ್ವಂದ್ವ ನಿಲುವಿಗೆ  ಇಳೆಯು ಬೆಚ್ಚಲು |
ಇಂದಿರೇಶನ ಮೋಹಿನಿಯ ರೂಪಕ್ಕೆ ಕಾಮಿಸುತಾ || ೧ || [೧೫೮]

**ಸೌರಾಷ್ಟ್ರ - ತ್ರಿವುಡೆ**

ಕ್ಷೀರಸಾಗರಶಯನ ಕರುಣಾ |
ವಾರಿಧಿಯೆ ಬಾ ಮಾರಜನಕನೆ |
ಸಾರಸಾಕ್ಷನೆ ಬರುವುದಿಲ್ಲಿಗೆ | ಪ್ರೇಮದಿಂದ || ೧ ||

ಚಂದ್ರಚೂಡನು ಸ್ಮರಿಸಲಾಕ್ಷಣ |
ಇಂದಿರೇಶನು ತಿಳಿದು ಬಲು ಆ |
ನಂದದಿಂದಲೆ ಬಂದು ಹರನಿಗೆ | ವಂದಿಸಲ್ಕೆ || ೨ ||

ಹರನೆ ಯಾತಕೆ ನೆನೆದೆಯೆನ್ನನು |
ಇರುವ ಕಾರ್ಯವದೇನು ನಮ್ಮೊಳ |
ಗಿರದು ಭೇದವು ಮುಂದಿನಾ ನಡೆ | ಒರೆಯಬೇಕು || ೩ || [೧೬೧]

**ಮೋಹನ - ಅಷ್ಟ**

ಇಂದಿರೇಶನೆ ನೀನು ಕಂದರ್ಪಜನಕ |
ಅಂದು ತೋರಿದೆ ನಿನ್ನ ಮೋಹಿನೀರೂಪ ||
ಇಂದು ಕಾಣಲು ಬೇಕು ಹೊಂದಿರೆ ಬಯಕೆ |
ಸುಂದರಾಂಗನೆ ನಿನ್ನ ಕರೆದೆ ನಾನದಕೆ || ೧ ||

ಭಾವಯೇನಿದು ನಿಮ್ಮ ಭಾವವೆ ಪೊಸತು |
ಭಾವಜಾರಿಗೆಯೇಕೆ ಮೋಹದಾಪತ್ತು ||
ಈ ವಿಧ ತರವಲ್ಲ ಮಾರಾರಿ ಶಿವಗೆ |
ಆವೇಶ ಬಿಡು ನೋಡು ಸ್ತ್ರೀವೇಷದೊಸಗೆ || ೨ ||

ಹುಚ್ಚುಕಟ್ಟುವ ರೂಪ ನಿನ್ನದಾಗಿರಲು |
ಬೆಚ್ಚಿದೆ ಮೂಲೋಕ ಮರುಳುಗೊಂಡಿರಲು ||
ನಿಚ್ಚಳ ಸೌಂದರ್ಯ ಸೆಳೆದಿರೆ ನನ್ನಾ |
ಕಿಚ್ಚು ಕಾಮದ ಬೆಂಕಿ ಸುಡುತಿಹೆ ಇನ್ನಾ || ೩ ||

ಬೇಡ ಬೇಡೆಲೊ ದೇವ ನೋಡಬೇಡದನ |
ಕಾಡುವ ಸ್ತ್ರೀರೂಪ ನೋಡೆ ಸಂಪನ್ನ ||
ಪಾಡು ಪಡುವೆ ನೀನು ರೂಢಿಯೊಳ್ ನಿಜದಿ |
ನೋಡಬಾರದು ನೀನು ಬೇಡುವೆ ದಯದಿ || ೪ ||

ಮಾರಾರಿ ನಾನಿಹೆ ಏನೆಂಬೆ ನಿನ್ನಾ |
ನಾರಿಗೆ ಮರುಳಾಗೆ ತೋರು ವೇಷವನಾ ||
ಭಾರಿ ಸಮಯವಾಯ್ತು ಆ ರೂಪ ಕಂಡು |
ತೋರುವುದದನಿಂದು ಕಾಣುವೆನೆಂದು || ೫ ||

ತ್ರ್ಯಂಬಕ ಬೇಡೆಲೊ ನಂಬಿಕೊ ನನ್ನಾ |
ಒಂಬತ್ತು ವಿಧದಿ ನಾ ನರ್ತಿಸಲಿನ್ನಾ ||
ಹುಂಬನಾಗುತ ನನ್ನ ಹಿಂದೆ ಬೀಳುವೆಯ |
ಬೆಂಬತ್ತಿ ಕಾಡುವೆ ನನ್ನನ್ನೆ ಪ್ರಿಯ || ೬ ||

ಮರುಳು ಮಾಧವ ನೀನು ಹರನಿಪ್ಪೆ ನಾನು |
ತರುಣಿಯ ಕಾಡುವ ತರುಣನೆಯೇನು ||
ಬರಿದೆ ಮಾತುಗಳೇಕೆ ತೋರಿಸು ಬೇಗ |
ವರ ಮೋಹಿನಿಯ ರೂಪ ಹರಿಯೆ ನೀನೀಗ || ೭ || [೧೬೮]

**ಭಾಮಿನಿ**

ಚಂದ್ರಮೌಳಿಯ ನುಡಿಯ ಕೇಳುತ |
ಇಂದಿರೇಶನು ಮನದಿ ಯೋಚಿಸಿ |
ಬಂದಿತೇನಿದು ಹುಚ್ಚು ನೋಡುವೆನಿವನ ಧೈರ್ಯವನು ||
ಅಂದು ಶರಧಿಯ ಮಥನಕಾಲದಿ |
ಮಂದಮತಿಗಳ ಮರುಳುಗೊಳಿಸಿದ |
ಸುಂದರದ ಮೋಹಿನಿಯ ರೂಪದಿ ಅವತರಿಸೆ ಧರೆಗೆ || ೧ || [೧೬೯]

**ಕಂದ**
ಕಾಮಪಿತಂ ತಾ ಹರುಷದಿ |
ಕಾಮಿನಿರೂಪವ ಧರಿಸುತ ಹರನೆದುರು ಬರಲ್ ||
ಕಾಮದ ಕೂಪದಿ ಬಿದ್ದಾ |
ಕಾಮಾರಿ ಸ್ಮರ ಬಾಧೆಗೆ ಸಿಲ್ಕುತೆ ನುಡಿದಂ || ೧ || [೧೭೦]

**(ಮಹಾಲಸಾನಾರಾಯಣಿ ಪ್ರತ್ಯಕ್ಷ)**

**ರೇವತಿ - ರೂಪಕ**
ನರ್ತಕನ ಪ್ರಿಯೆ ದೇವಿ ನಾರಾಯಣಿ |
ಕೃತ್ತಿವಾಸನ ಘನ ಚಿತ್ತಾಪಹಾರಿಣಿ ||
ನರ್ತಿಸುತಲಿ ಬರೆ ನಾರಾಯಣಿ |
ಮಹಾಲಸಾ | ನಾರಾಯಣಿ | ಶ್ರೀಮನ್ನಾರಾಯಣಿ || ೧ ||

ಮರ್ತ್ಯಲೋಕಕೆ ಬಂದ ಶಕ್ತಿಸ್ವರೂಪಿಣಿ |
ಮುಕ್ತಿಪ್ರದಾಯಿನಿ ಮಂಗಲರೂಪಿಣಿ || ೨ ||

ಸಿರಿಯರಸನ ವರ ಪೂರ್ಣಸ್ವರೂಪಿಣಿ |
ಧರೆಯುದ್ಧಾರಕೆ ಬಂದ ಕಾತ್ಯಾಯಿನಿ || ೩ ||

ವೇದಘೋಷದ ಜಯನಾದದ ಮಧ್ಯದಿ |
ಆದಿಮಾಯೆಯು ಬಲು ಮೋದದಿ ನರ್ತಿಸೆ || ೪ || [೧೭೪]

**ಬೇಹಾಗ್ - ರೂಪಕ**
ಮಾರಜನಕನಂದು ವಹಿಲದಿ | ಮೋಹಿನಿಯ ರೂಪ |
ತೋರಿ ನಿಲಲು ಸ್ತ್ರೀಯ ರೂಪದಿ ||
ಮಾರವೈರಿ ಕಣ್ಣು ಬಿಡುತ | ನಾರಿವೇಷವೆಂದು ಮರೆತ |
ಸಾರಸಾಕ್ಷ ತನ್ನ ಮಾಯೆ | ಬೇರೆ ತನ್ನ ತಾನೆ ಮರೆತ || ೧ ||

ನರ್ತಿಸಿದಳು ಚೆಲುವ ಬಾಲೆಯು | ಒಂಬತ್ತು ವಿಧದ |
ನರ್ತನದಿ ವೈಯಾರದಿಂದಲು ||
ಕೃತ್ತಿವಾಸ ಬೆರಗುಪಟ್ಟು | ಬಿಟ್ಟಕಣ್ಣಿನಿಂದ ನೋಡೆ |
ಚಿತ್ತ ಕೆಟ್ಟುಹೋಯ್ತು ಪೇಳ್ದ | ಸತ್ಯ ಎನಗೆ ಇವಳೇ ಬೇಕು || ೨ ||

ಏಣನಯನೆ ಭೃಂಗಕುಂತಳೆ | ಬಾ ಬಾರೆ ಬಳಿಗೆ |
ಕಾಣೆ ನಿನಗೆ ಸರಿಯು ಯಾರೆಲೆ ||
ಕ್ಷೋಣಿಯೊಳಗೆಯಿಂಥ ಚೆಲುವ | ಕಾಣದಾದೆ ನೋಡೆ ಕೃಷ್ಣ |
ವೇಣಿ ಮಧುರವಾಣಿ ನೀ ಕ | ಲ್ಯಾಣಿಯೆನ್ನ ಮನೋರಮಣಿ || ೩ ||

ಕಾಮಹರನ ಮಾತ ಕೇಳುತ | ನಾಚುತ್ತಲಂದು |
ಕಾಮಪಿತನು ಹರನ ತಡೆಯುತ ||
ನಾರಿಯಿರೆ ನೀನೇನ ನುಡಿವೆ | ಸಾರು ದೂರ ನಿನ್ನನೊಲ್ಲೆ |
ಮಾರವೈರಿ ನೀನುಯಿಪ್ಪೆ | ತೋರೆ ಕಾಮ ಕೆಟ್ಟು ಪೋಪೆ || ೪ ||

ಇಕ್ಷುಚಾಪ ಸೇಡ ತೀರಿಸೆ | ಸುಮಬಾಣ ಬಿಟ್ಟು |
ಶಿಕ್ಷಿಸಿದನುಯಿಂತು ಕಾಡಿಸೆ ||
ರಕ್ಷಿಸೆನ್ನ ಯೆನ್ನ ಸೇರಿ | ಪಕ್ಷ ದೂರ ನಿಲ್ಲಲೇಕೆ |
ಅಕ್ಷಿಯಿಂದ ಕೊಲ್ಲಲೇಕೆ | ವಕ್ಷಸ್ಥಳದಿ ಅಪ್ಪು ಯೆನ್ನ || ೫ || [೧೭೯]

**ಸುರುಟಿ - ಏಕ**
ಬೇಡ ಬೇಡ ಮೃಡನೆ | ಎನ್ನನು |
ಕಾಡದಿರೆಲೊ ಹರನೆ ||
ನೋಡುವ ಮಂದಿಯು | ಯೇನೆಂಬರು ತವ |
ಗಾಢದ ಪ್ರೇಮವ | ಹಂಗಿಪರಲ್ಲವೆ || ೧ ||

ಹಂಗಿಸೆ ನಾ ಬೆದರೆ | ಬಾರೆಲೆ |
ಭೃಂಗಕುಂತಳೆ ಬಾಲೆ ||
ಕಂಗಳಿಂದೇತಕೆ | ಕೊಲ್ಲುವೆಯೆನ್ನನು |
ಅಂಗಜ ತಪದುರಿ | ಯಿಂದಲೆ ರಕ್ಷಿಸು || ೨ ||

ಎಂದ ಮೃಡನ ನುಡಿಗೆ | ಮೋಹಿನಿ |
ಯಂದು ಹರನ ಕೈಗೆ ||
ಬಂಧಿಯಾಗದಿರೆ | ನಿಶ್ಚಯಿಸುತ ತಾ |
ನಂದು ಓಡುತಿರೆ | ಬೆಂಬತ್ತಲು ಶಿವ || ೩ ||

ಏರೆ ಬೆಟ್ಟವೊಂದ | ಶ್ರೀಹರಿ |
ಮಾರವೈರಿಯು ಕಂಡ ||
ಭೋರನೆ ಬೆಟ್ಟವ | ನೇರುತ ಪಿಡಿದನು |
ಮಾರಜನಕನನೆ | ಅಪ್ಪಲು ಪ್ರೇಮದಿ || ೪ || [೧೮೩]

**ಭಾಮಿನಿ**
ಇಂದಿರೇಶನನಪ್ಪೆ ಹರ ತಾ |
ನಂದು ಕಾಮಾವೇಶದೊಳು ಅದ |
ರಿಂದ ವೀರ್ಯವು ಸ್ಖಲನವಾಗಲು ಸುರರು ಸಂಭ್ರಮಿಸೆ ||
ಚಂದದೊಳು ಶಾಸ್ತಾರ ಜನ್ಮವ |
ನಂದು ಕಾಣುತ ಮುದ್ದು ಕಂದನ |
ವಂದಿಸಲು ಹರಿ ಹರರ ಬಳಿಗಾ ನಾರದನು ಬರಲು || ೧ || [೧೮೪]

**ನವರೋಜು - ಆದಿ**
ದೇವೀ ದೇವರ ಕಂಡು | ತಾ |
ಭಾವಾವೇಶದೊಳಂದು ||
ತೀವಿದ ತೋಷದಿ | ನಾರದ ನುಡಿದನು |
ಭೂವಲಯದೊಳು ತವ | ಲೀಲೆಯ ತೋರಿರೆ || ೧ ||

ಒಂದಾಗೇ ಹರಿ ಹರರು | ಇದ |
ಕೊಂಡಾಡೆ ಧರೆ ಜನರು ||
ಕಂದನು ಜನಿಸಲು | ಮುಂದಿನ ಜನಕತಿ |
ವಂದ್ಯನು ನಿಮ್ಮಯ | ಕಂದನು ದೇವನು || ೨ ||

ನಾರದನಾ ನುಡಿ ಕೇಳಿ | ಆ |
ಮಾರಾರೀ ಮುದ ತಾಳಿ ||
ಶ್ರೀರಮಣನು ಸಹ | ಮಾಯೆಯ ತನ್ನೊಳು |
ಬೀರಲುಯೀಪರಿ | ಕೃತ್ಯವಿದಾಯಿತು || ೩ || [೧೮೫]

**ವಾರ್ಧಕ**
ಹರಿರೂಪ ಮೋಹಿನಿಯು ನಾರದಗೆ ನುಡಿದಳಾ |
ಹರಿ ಹರರ ಮಿಲನಸ್ಥಳ ಶರಧಿಮಥನದ ಕ್ಷೇತ್ರ |
ಇರುವೆ ನಾನಿಲ್ಲಿ ಶ್ರೀಮಹಾಲಸಾ ಬೆಟ್ಟದೊಳು ನೇವಾಸಿ ಪುರವರದೊಳು ||
ವರಮಹಾಲಸ ದೇವಿ ನಾರಾಯಣೀಯೆಂದು |
ಧರೆಯ ಜನ ಕೊಂಡಾಡೆ ದುರುಳ ಚಂಡಾಸುರನ |
ತರಿದು ನಾ ಶರಣರನು ಪೊರೆಯುವೆನು ನೇಪಾಳ ಕ್ಷೇತ್ರದೊಳಗಲ್ಲಿ ನೋಡೆ || ೧ ||

ಕ್ರೂರ ಹಾಲಾಹಲವ ಶಿವ ತಾನು ಕುಡಿಯೆ ಬಾ |
ಯಾರಿ ಜಲವನು ಬಯಸಿ ತಿಸುಳವನ್ನೆರಡು ಸ್ಥಳ |
ಊರೆ ವೇತ್ರಾವತಿ ತ್ರಿಶೂಲತೀರ್ಥಗಳೆರಡು ಸಂಗಮಿಸೆ ಗಂಡಕಿಯೊಳು ||
ಸೇರಿದರೆ ಅಲ್ಲಿ ಸಾಲಿಗ್ರಾಮ ರೂಪದೊಳು |
ಭೂರಿ ಹರುಷದೊಳಿರುವೆ ಪಶುಪತಿಯ ಸನಿಹದೊಳು |
ನಾರದನೆ ದೇವಘಾಟದ ಸನಿಹ ಮೋಹಿನೀರಾಜ ಪೆಸರಿಂದ ಮೆರೆವೆ || ೨ || [೧೮೯]

**ಅಧ್ಯಾಯ ಆರು : ಚಂಡಾಸುರಮರ್ದಿನಿ**

**ಕಾಂಭೋದಿ - ಝಂಪೆ**
ಇತ್ತಲಾ ಜಮದಗ್ನಿ | ಪುತ್ರ ಭಾರ್ಗವನಂದು |
ಉತ್ತರ ಮಹೇಂದ್ರ ಪರ್ವತದಿ ||
ಸ್ವಸ್ಥದಿಂದಿರುತಿರಲು | ಚಿತ್ತದೊಳು ಯೋಚಿಸಿದ |
ಪೃಥ್ವಿಗಾ ಕಲಿಗಾಲ ಜವದಿ || ೧ ||

ಒಂದು ಪಾದದಿ ಧರ್ಮ | ನಿಂದಿರಲು ಪ್ರಾರಬ್ಧ |
ಮುಂದೆ ಭೀಕರವು ಕಲಿಯುಗದಿ ||
ನಿಂದಿರಲು ಕಲ್ಲಾಗಿ | ತ್ರೈಮೂರ್ತಿಗಳು ಜನರ |
ಕುಂದುಗಳ ನೀಗಿಸಲಿಕಾಗಿ || ೨ ||

ಮನವ ಮಾಡಲುಬೇಕು | ಎನುತ ನಿಶ್ಚಯಿಸುತ್ತ |
ಜನಪದದಿ ದಶಗೋತ್ರ ದ್ವಿಜರ ||
ವಿನುತ ತ್ರಿಹೋತ್ರಪುರ | ವಾಸಿಗಳು ವಿಪ್ರರನು |
ಸನುಮತದಿ ಪಾಪ ನೀಗಿಸಲು || ೩ ||

ಬಂದರು ದಧೀಚಿಸುತ | ಸಾರಸ್ವತನ ಶಿಷ್ಯ |
ವೃಂದ ದಶಗೋತ್ರ ಬ್ರಾಹ್ಮಣರು ||
ವಂದನೀಯರು ವತ್ಸ | ಕೌಂಡಿನ್ಯ ಕಾಶ್ಯಪರು |
ಚಂದದಿ ವಸಿಷ್ಠ ಜಮದಗ್ನಿ || ೪ ||

ವೇದಕೋವಿದ ಭಾರ | ದ್ವಾಜ ವಿಶ್ವಾಮಿತ್ರ |
ಸಾದರದಿ ಗೌತಮನು ಅತ್ರಿ ||
ಮೋದದೊಳು ಬಂದರಾ | ಭಾರ್ಗವನ ಕರೆಗೆಯಾ |
ಮೇದಿನಿಯ ಗೋಮಾಂತಕಂದು || ೫ ||

ಬನ್ನಿರೈ ದಶಗೋತ್ರ | ಭೂಸುರರು ನೀವೆಲ್ಲ |
ಪುಣ್ಯಭೂಮಿಯ ಕಂಡಿರಲ್ಲ ||
ಇನ್ನು ನೀವಿಲ್ಲಿ ಜೀ | ವಿಪುದು ಅರ್ಚನೆಗೆ ನಾ |
ಸನ್ಮತದಿ ಕೊಡುವ ಮೂರ್ತಿಗಳ || ೬ ||

ವರಮಹಾಲಸ ದೇವಿ | ವರದೆ ಶಾಂತದುರ್ಗೆ |
ಮೆರೆವ ಮಹಮಾಯಿ ನಾಗೇಶ ||
ಕರುಣೆಯಿಂ ಮಂಗೇಶ | ಮಹಾಲಕ್ಷ್ಮಿ ರಮನಾಥ |
ಮೆರೆವ ಮೂರ್ತಿಗಳ ಭಾರ್ಗವನು || ೭ || [೧೯೬]

**ಭಾಮಿನಿ**
ಪರಶುರಾಮನು ವಿಪ್ರಶ್ರೇಷ್ಠರಿ |
ಗಿರದೆ ಈ ವಿಧ ದೇವತಾರ್ಚನೆ |
ನಿರತ ಮಾಡಿರಿ ನಿಮಗೆ ಮಂಗಳ ಕಲಿಯುಗದಿ ನೋಡೆ ||
ಹರುಷದಿಂದಲಿ ನುಡಿದರಾಕ್ಷಣ |
ಚರಣಕೆರಗುತ ಭಾರ್ಗವನೆ ನಮ |
ಗಿರಲು ಸುಸ್ಥಳ ಕರುಣಿಪುದು ಸ್ವತಂತ್ರ ಜೀವನಕೇ || ೧ || [೧೯೭]

**ಸುರುಟಿ - ಏಕ**
ದಶವಿಧ ಬ್ರಾಹ್ಮಣರೆ | ಮೆಚ್ಚಿದೆ |
ರಸೆಯೊಳು ಜೀವಿಪರೆ ||
ಎಸೆಯುವ ಸುಸ್ಥಳ | ಕರುಣಿಪೆ ಚಿಂತೆಯ |
ವಿಷಯವ ಬಿಟ್ಟು | ಖುಷಿಯನು ಪಡೆವುದು || ೧ ||

ವರುಣನ ನೆನೆಯಲ್ಕೆ | ತಿಳಿಯುತ |
ಶರಧಿಪನಾಕ್ಷಣಕೆ ||
ಭರದಿಂದೋಡುತ | ಬರುತಲಿ ರಾಮನ |
ಚರಣಕೆಯೆರಗಿದ | ಹೆದರುತ ಮನದಲಿ || ೨ ||

ಕರೆಸಿದ ಕಾರಣವ | ಅರುಹೈ |
ಕರುಣದೊಳೆಲೆ ದೇವ ||
ಚರಣದ ದಾಸನು | ಇರುತಿರೆ ನನ್ನೊಳ |
ಗಿರಿಸುತ ಕರುಣೆಯ | ಅಪ್ಪಣೆ ಕೊಡುವುದು || ೩ ||

ದಶವಿಧ ಬ್ರಾಹ್ಮಣರು | ಕಂಡರೆ |
ರಸೆಯೊಳು ಸಜ್ಜನರು ||
ಕುಶಲದೊಳಿರುವರೆ | ಸುಸ್ಥಳ ಬೇಕದ |
ಪೊಸತು ಪುರವ ನಿ | ರ್ಮಿಸುವುದು ಇಲ್ಲಿಯೆ || ೪ || [೨೦೧]

**ಭಾಮಿನಿ**
ನಿನ್ನ ಪುರವನೆ ಪೋಲುವಂತಹ |
ಘನ್ನ ಪಟ್ಟಣ ನಿರ್ಮಿಸೈ ಸಂ |
ಪನ್ನವಾಗಲಿ ರತ್ನಖಚಿತದ ವಿಭವ ಕಾಣಿಸಲಿ ||
ಇನ್ನು ಮುಂದಕೆ ಜನರು ಜೀವನ |
ವನ್ನು ಸಾಗಿಸೆ ಪ್ರಕೃತಿ ಸಿರಿಯಲಿ |
ಮುನ್ನ ಮೆರೆಯಲಿ ವಿಪ್ರರೆಲ್ಲರು ದೇವಪೂಜೆಯಲಿ || ೧ || [೨೦೨]

**ನವರೋಜು - ಏಕ**
ಆಗಲಿ ಆಗಲಿ ದೇವ | ಭವ |
ಸಾಗರ ದಾಟಿಪ ಭಾವ ||
ಈಗಲೆ ಈ ಕ್ಷಣ | ನಿರ್ಮಿಸಿಕೊಟ್ಟೆನು |
ಹೇಗಿದೆ ಪೇಳೈ | ಪಟ್ಟಣ ನೋಡಲು || ೧ ||

ವರುಣನೆ ಮೆಚ್ಚಿದೆ ಭಲರೆ | ಬಲು |
ಹರುಷವು ನೋಡಲು ಧಿರುರೆ ||
ವರುಣಾಪುರಯಿದು | ಮೆರೆಯಲಿ ಧರೆಯೊಳು |
ಇರಲೀ ವಿಪ್ರರು | ಸುಖದಿಂದಿಲ್ಲಿಯೆ || ೨ || [೨೦೪]

**ಕೇದಾರಗೌಳ - ಅಷ್ಟ**
ವರುಣಾಪುರದಿ ವರ | ಧರೆಯಮರರು ಇರು |
ತಿರೆ ಮುದದೊಳಗಂದಿಲಿ ||
ವರ ಭಾರ್ಗವನ ದಯ | ದೊರಕಿತು ನಮಗಿಲ್ಲಿ |
ಸರಿ ಯಾರು ನಮಗಿಂದಿಲಿ || ೧ ||

ಹರಿಯೆ ಸರ್ವೋತ್ತಮ | ಶರಣರಕ್ಷಕ ದೇವ |
ಕರುಣಾಳು ಶ್ರೀರಂಗನ ||
ಪರಮಭಾಗವತ ಶ್ರವಣ ಕೀರ್ತನಗಳಿಂದ |
ಹರುಷದಿ ಧ್ಯಾನಿಸುತ || ೨ ||

ವೇದಪಾಠವು ಯಜ್ಞ | ದಾನ ಅತಿಥಿಪೂಜೆ |
ಸಾದರದೊಳು ನಡೆಯೆ ||
ಮೇದಿನಿ ಸುರರೆಲ್ಲ | ಪರಶುರಾಮನ ನಿತ್ಯ |
ಮೋದದಿ ನೆನೆಯುತ್ತಲಿ || ೩ ||

ಒಂದು ದಿನದಿ ವಿಪ್ರ | ವೃಂದ ಯೋಚಿಸುತಲೆ |
ಬಂದಿಪ್ಪ ಕಲಿಯುಗದಿ ||
ಇಂದಿರಾಧವ ಯಜ್ಞ | ಚಂದದಿ ಮಾಡಲು |
ಅಂದು ತಾ ನಿಶ್ಚಯಿಸಿ || ೪ || [೨೦೮]

**ಭಾಮಿನಿ**
ಪೃಥ್ವಿಯಮರರು ವರುಣಪುರದಲಿ |
ನಿತ್ಯನೈಮಿಕ ಯಜ್ಞ ಯಾಗದಿ |
ತೃಪ್ತಿಪಡುತಿರೆ ಕಲಿಯುಗದಿ ಸದ್ಧರ್ಮ ಪಾಲಿಸಲು ||
ಭಕ್ತ ಜನರಾ ಕಷ್ಟ ನೀಗಿಪ |
ಉತ್ತಮದ ಭಾರ್ಗವನ ಯಾಗವ |
ಅರ್ತಿಯಿಂದಲಿ ಗೈಯಬೇಕೆನುತಂದು ನಿಶ್ಚಯಿಸೆ || ೧ || [೨೦೯]

**ಸೌರಾಷ್ಟ್ರ - ತ್ರಿವುಡೆ**
ಇತ್ತ ಗೋಮಾಂತಕದ ವಿಪಿನದಿ |
ಧೂರ್ತ ಚಂಡಾಸುರನು ಮೆರೆದಿರೆ |
ಪೃಥ್ವಿಯಮರರ ಸದೆದು ತಾ ಮೆರೆ | ಯುತ್ತಲಿರಲು || ೧ ||

ದುಷ್ಟ ಜನರಾ ಪಡೆಯ ಸೇರಿಸಿ |
ದುಷ್ಟದಾನವ ಮೆರೆದನಾ ಬಲು |
ದಟ್ಟ ವಿಪಿನದಿ ಗುಪಿತದೊಳು ತಾ | ನಿದ್ದನಂದು || ೨ ||

ಒಂದು ದಿನ ಓಲಗವ ಕೊಟ್ಟಿರೆ |
ಬಂದರಂದಾ ಗುಪ್ತಚಾರರು |
ಚಂದದೊಳು ವಂದಿಸುತ ಚಂಡನಿ | ಗೆಂದರಂದು || ೩ || [೨೧೨]

**ಮುಖಾರಿ - ಏಕ**
ಚಿತ್ರವಿಸಯ್ಯ ಚಂಡ ದೈತ್ಯ | ನಮ್ಮೆಲ್ಲರ ದೇವ |
ವೃತ್ತಾಂತ ಪೇಳ್ವೆ ಕೇಳು ಮಾತ ||
ಪೃಥ್ವಿಯಮರರಾ | ಗೋಮಾಂತಕದೊಳು |
ನಿತ್ಯಪೂಜೆ ಗೈಯುತ್ತಲಿ ಮೆರೆವುದ || ೧ ||

ಪರಮವೈಷ್ಣವರು ದಶಗೋತ್ರಿಗಳು | ತ್ರಿಹೋತ್ರದಿಂದ |
ವರ್ಣಿಗೆ ವಲಸೆ ಬಂದ ದ್ವಿಜರು ||
ವರುಣನ ನೆರವಿಂ | ಪುರವನೆ ಕಟ್ಟಿಸಿ |
ಹರುಷದಿ ಮೆರೆವರು | ಯಾಗವ ಮಾಳ್ಪರು || ೨ || [೨೧೪]

**ಸೌರಾಷ್ಟ್ರ - ತ್ರಿವುಡೆ**
ಕೇಳಿ ಕಿಡಿ ಕಿಡಿಯಾಗಿ ಚಂಡನು |
ತಾಳಿ ರೋಷವ ನುಡಿದನೀ ಬಗೆ |
ಯೇಳಿಗೆಯ ನಾ ಸಹಿಸಲಾರೆನು | ವಿಪ್ರಕುಲದಾ || ೧ ||

ಯಾಗ ಯಜ್ಞಾದಿಗಳ ಮಾಡುವ |
ಯೋಗಿಗಳ ನಿಗ್ರಹಿಸಿ ಮೆರೆದಿರೆ |
ಬೇಗ ತೆರಳುವ ನಾವು ವಿಪ್ರರ | ಗಾರುಗೆಡಿಸೆ || ೨ || [೨೧೬]

**ಭಾಮಿನಿ**
ಇತ್ತಲಾ ದಶಗೋತ್ರ ವಿಪ್ರರು |
ಧೂರ್ತ ಚಂಡನ ಬರವ ತಿಳಿಯುತ |
ಚಿತ್ತದಲಿ ಕಳವಳಿಸಿ ಭಾರ್ಗವರಾಮನನು ನೆನೆದು ||
ಭಕ್ತವತ್ಸಲ ರಕ್ಷಣೆಯ ನೀ |
ನಿತ್ತು ಪೊರೆವುದು ಬಂದ ದೈತ್ಯಗೆ |
ಮೃತ್ಯುವಾಗುತ ಧರೆಗೆ ಮಂಗಲ ಕರುಣಿಪುದುಯೆನಲು || ೧ || [೨೧೭]

**ಮೇಚಕಲ್ಯಾಣಿ - ಅಷ್ಟ**
ಎಂದು ವಿಪ್ರರು ಭಾರ್ಗವನ ನೆನೆಯೆ | ಕಾಣಿಸಲು ವಿಪ್ರರ |
ವೃಂದ ಸಂತಸದಿಂದಲು ಕುಣಿಯೆ ||
ಬಂದೆಯಾ ಜಮದಗ್ನಿಪುತ್ರನೆ |
ಚಂದದಿಂದಲಿ ಕರುಣೆ ತೋರುತ |
ಮಂದಮತಿ ಚಂಡನನು ನೀನೇ |
ಕೊಂದು ಸಂಕಷ್ಟಗಳ ನೀಗಿಸು || ೧ ||

ಒಡನೆ ನುಡಿದನು ರಾಮ ವಿಪ್ರರಿಗೆ | ಕಲಿಕಾಲದೊಳು ನಾ |
ಹಿಡಿಯೆ ಕೊಡಲಿಯ ನಿಮ್ಮ ರಕ್ಷಣೆಗೆ ||
ದೃಢದಿ ನಾನೇ ಹಿಂದೆ ಸ್ಥಾಪಿಸೆ |
ಒಡತಿ ಮಹಾಲಸ ದೇವಿ ದೇಗುಲ |
ಮೃಡನರಸಿ ತ್ರಿಗುಣಾಂಬಿಕೆಯು ಸು |
ದೃಢದಿ ಪೊರೆವಳು ನಿಮ್ಮನೆಲ್ಲರ || ೨ ||

ಭಕ್ತಿಯಿಂ ಮಹಲಸೆಯ ಪ್ರಾರ್ಥಿಸಲು | ಜಗನ್ಮಾತೆ ಕರುಣದಿ |
ಕಷ್ಟಗಳ ಪರಿಹರಿಸಿ ಪೊರೆಯುವಳು ||
ದೈತ್ಯ ಚಂಡನ ಕೊಂದು ನಿಮ್ಮಯ |
ನರ್ತಿಯಿಂದಲಿ ಪೊರೆವ ದೇವಿಯ |
ಭಕ್ತಿಯಿಂದಲಿ ಬೇಡಿಕೊಳ್ಳಿರಿ |
ಚಿತ್ತಶುದ್ಧದೊಳನ್ನಪೂರ್ಣೆಯ || ೩ || [೨೨೦]

**ಸಾರಂಗ - ಅಷ್ಟ**

ಜಯತು ಮಹಾಲಸ ದೇವಿಯಮ್ಮ | ತಾಯೆ |
ಭಯವ ನೀಗಿಸು ಮಾತೆ ಪೊರೆಯುತ ನಮ್ಮ ||
ದಯದೋರಿ ಚಂಡನ ತರಿದು | ನಮ |
ಗೀಯುವುದಭಯವ ಕರುಣದೊಳೊಲಿದು || ೧ ||

ಮಹಿಷಮರ್ದಿನಿ ನೀನೆ ತಾಯೇ | ಇಂಥ |
ಕುಹಕಿಯ ತರಿದೆಮ್ಮ ಕರುಣದಿ ಪೊರೆಯೆ ||
ಮಹಿಯ ಕಂಟಕ ನೀಗಿಸುವುದು | ತಾಯೇ |
ಮಹಾಲಸೆ ಬೇಡುವೆ ದೈನ್ಯದೊಳಿಂದು || ೨ || [೨೨೨]

**ಭಾಮಿನಿ**

ಚತುರ್ಭುಜೆಯು ಜಗದಾದಿಮಾತೆಯು |
ಪೃಥ್ವಿಯಮರರ ಮೊರೆಯನಾಲಿಸಿ |
ಹಿತದಿ ದರುಶನ ಕೊಡಲು ಮಹಾಲಸೆ ದೇವಿ ಶ್ರೀದುರ್ಗೆ ||
ಕ್ಷಿತಿಯ ರಕ್ಷಿಸೆ ಮನವ ಮಾಡಿದ |
ರತಿಪತಿಯ ಪಿತನರಸಿ ದೇವಿಯ |
ಸ್ತುತಿಸಿದರು ದಶಗೋತ್ರ ವಿಪ್ರರು ಭಕ್ತಿಭಾವದಲಿ || ೧ || [೨೨೩]

**ಸೌರಾಷ್ಟ್ರ - ತ್ರಿವುಡೆ**

ಏಳಿರೇಳಿರಿ ವಿಪ್ರಶ್ರೇಷ್ಠರೆ |
ತಾಳಿ ಧೈರ್ಯವ ಕಷ್ಟವೇನಿದೆ |
ಪೇಳುವುದು ಪರಿಹರಿಪೆ ನಿಮ್ಮಯ | ಗೋಳು ಪೇಳಿ || ೧ ||

ಮಹಲಸೆಯು ನಾರಾಯಣಿಯು ನಾ |
ಮಹಿಯ ಪೊರೆಯಲು ಇತ್ತೆ ದರ್ಶನ |
ಅಹಿತ ಘಟನೆಗಳೇನು ಪೇಳಿರಿ | ವಿಹಿತದಿಂದ || ೨ ||

ಮಂಗಳಾಂಗಿಯೇ ಮಾತೆ ನೀ ಶ್ರೀ |
ರಂಗನರ್ಧಾಂಗಿನಿಯೆ ಮೋಹಿನಿ |
ಭಂಗತರುವಾ ದೈತ್ಯ ಚಂಡನ | ಭಯಕೆ ಅಂಜಿ || ೩ ||

ಧರೆಯ ಕಂಟಕ ಚಂಡದೈತ್ಯನ |
ತರಿದು ನಮ್ಮನು ರಕ್ಷಿಪುದು ಕೃಪೆ |
ಯಿರಿಸಿ ವರುಣಾಪುರದ ಜನರನು | ಹರುಷದಿಂದಾ || ೪ || [೨೨೪]

**ಭಾಮಿನಿ**

ಬೆದರದಿರಿ ದಶಗೋತ್ರವಿಪ್ರರೆ |
ಮದಮುಖನು ಆ ಚಂಡದೈತ್ಯನ |
ಸದೆದು ನಿಮ್ಮನು ರಕ್ಷಿಪೆನು ಬಿಡಿ ಮನದ ಅಂಜಿಕೆಯ ||
ಕದನಕೈದುವೆನಿಂದೆ ಚಂಡನ |
ರುಧಿರವನು ಹೀರುತ್ತ ಮೆರೆಯುವೆ |
ತ್ರಿದಶರಿಗೆ ಸಂತಸವ ಕೊಡುವೆನು ದೈತ್ಯಹನನದೊಳು || ೧ || [೨೨೮]

**ಮಾರವಿ - ಏಕ**

ಮಣಿಮಯ ರಥವ | ನ್ನೇರುತ ಮೋಹಿನಿ |
ಅನುನಯದೊಳಗಂದು ||
ದನುಜರ ಹನನಕೆ | ಮನಮಾಡುತಲಾ |
ಧನುಶರ ಪಿಡಿದಂದು || ೧ ||

ಚಂಡದೈತ್ಯನಾ | ಪುರವರಕೈದುತ |
ಚಂಡಿಯಾಗಿ ನಿಲಲು ||
ಕಂಡು ಭಯಪಡೆ | ದುರುಳನ ಸೈನ್ಯವು |
ಭಂಡ ದೈತ್ಯ ತಾನು || ೨ ||

ವೀರಾವೇಶವ | ತಾಳುತ ಕೇಳಿದ |
ನಾರಿಯೆ ನೀನಾರು ||
ಈ ರೀತಿಯ ಪರಿ | ವಾರವ ಸೇರಿಸೆ |
ಕಾರಣವೇನಿಂದು || ೩ || [೨೩೧]

**ಭೈರವಿ - ಅಷ್ಟ**

ಚಂಡ ದಾನವನೆ ಕೇಳು | ನಾ ಮೋಹಿನಿ |
ಭಂಡನಾಗಿಹ ನಿನ್ನೊಳು ||
ಕಂಡೆನು ದೋಷವ | ಬಂದಿಹೆ ಸಮರಕೆ |
ಚಂಡಿಯು ಮೋಹಿನಿಯು || ೧ ||

ಕರನಾಲ್ಕು ನೋಡೆ ನಿನ್ನ | ಈ ರೂಪಕ್ಕೆ |
ತರವೇನು ಪೇಳು ಚಿನ್ನ ||
ಧುರದಾಸೆ ಬಿಟ್ಟೆನ್ನ | ವರಿಸಿಕೊ ಪಟ್ಟದ |
ಅರಸಿಯಾಗಿರುವೆ ಎನ್ನ || ೨ ||

ಲಜ್ಜೆಗೇಡಿಯೆ ಚಂಡನೇ | ಕಡೆಗಾಲ |
ಸಜ್ಜಾಗು ಧುರಕೆ ನೀನೆ ||
ಲಜ್ಜೆ ಬಿಟ್ಟವ ನೀನು | ಯಮಪುರಿಗಟ್ಟುವೆ |
ಸಜ್ಜಾಗು ಕಾಳಗಕೆ || ೩ ||

ತರುಣಿಮಣಿಯೆ ನಿನ್ನನು | ಕಂಡರೆ ಮೋಹ |
ಪರವಶನಾದೆ ನಾನು ||
ನೆರೆ ಬಸವಳಿದಿಪ್ಪೆ | ನಿನ್ನನ್ನು ಗೆಲ್ಲುತ್ತ |
ವರಿಸಿಕೊಂಬೆನು ಈಗಲೇ || ೪ || [೨೩೫]

**ವಾರ್ಧಕ**

ವರ ಮಾರ್ಗಶಿರ ಶುದ್ಧ ಷಷ್ಠಿದಿನ ಚಂಡನನು |
ಧುರದೊಳಗೆ ಕೆಡಹುತ್ತ ಶಿರವ ಚೆಂಡಾಡಿದಳು |
ವರ ಮಹಾಲಸದೇವಿ ಎಡಕರದಿ ಖಳಶಿರವ ಪಿಡಿಯುತ್ತ ವರ್ಣೆಗೈದಲ್ ||
ಸುರರು ಹೂಮಳೆ ಕರೆಯೆ ದಶಗೋತ್ರ ಬ್ರಾಹ್ಮಣರು |
ಹರುಷದೊಳು ಸ್ತುತಿಸುತ್ತ ನಲಿದಾಡಿ ಪೊಗಳುತಿರೆ |
ಪರಮ ಮಂಗಳದೇವಿ ಅಭಯವನು ಕರುಣಿಸುತ ತಳೆಯಲಂತರ್ಧಾನವ || ೧ ||

ಪರಮ ಪಾವನವಾದ ವರ ಕಥನ ಕೇಳಿದರೆ |
ಧರೆಯೊಳಗೆ ಎಲ್ಲ ಪಾಪಗಳು ಪರಿಹಾರ ನೆನೆ |
ದರೆ ಮಹಾಲಸ ದೇವಿ ನಾರಾಯಣಿಯು ನಮ್ಮನನವರತ ಪೊರೆಯುತಿಹಳು ||
ಧರೆಯ ವಿದ್ವಜ್ಜನರು ಈ ಕೃತಿಯ ಮೆರೆಸುವುದು |
ಇರಲು ದೋಷವು ಹಂಸ ಕ್ಷೀರ ನ್ಯಾಯದ ತೆರದಿ |
ಪರಿಗಣಿಸಿ ಹರಸುವುದು ನಾರಾಯಣೀದೇವಿ ಕರುಣಿಸಲಿ ಮಂಗಲವನು || ೨ ||

ಹರಿ ಹರರು ಒಂದೆಂಬ ತಿರುಳನಾಧರಿಸಿ ನಾ |
ಬರೆದೆನೀ ಕಥನವನು ಶ್ರೀದೇವಿ ಚರಣದೊಳು |
ಉರುತರದ ಭಕ್ತಿಯೊಳು ಇರಿಸಿದೆನು ಭಾಸ್ಕರನು ಅರಿತವನು ನಾನಲ್ಲವು ||
ಪರಮ ಭಾಗವತರಿದ ಮೆರೆಸುವುದು ಧರೆಯಲ್ಲಿ |
ಇರಲು ತಪ್ಪುಗಳ ತಿದ್ದುತಲೆಯಿಂದು ಕಥನವನು |
ಶರಣವತ್ಸಲೆ ದೇವಿ ಪೊರೆಯಲೀ ನಮ್ಮನ್ನು ಧರೆಗೆ ಮಂಗಳವಾಗಲಿ || ೩ || [೨೩೮]

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು :** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು :** ಹೇರಂಜೆ ಕೃಷ್ಣ ಭಟ್ಟ, ಸೇವಧಿ ಪ್ರಕಾಶನ

**ಪ್ರಸಂಗ ಪ್ರತಿ ಆಧಾರ :** ಪ್ರಸಂಗಕರ್ತರ ಮೂಲ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು :** ಅಗರಿ ಭಾಸ್ಕರ ರಾವ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಬರವಣಿಗೆ :** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ವಿನ್ಯಾಸ :** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ :** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ